ಕರ್ನಾಟಕ ಸರ್ಕಾರ

## ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

# ಪಕ್ಷಿನೋಟ–2019



ಜಂಟಿ ನಿರ್ದೇಶಕರು (ಅಂಕಿ–ಅಂಶ) ವಿಭಾಗ
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹೆಬ್ಬಾಳ, ಬೆಂಗಳೂರು–560024

# ಮುನ್ನುಡಿ

ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಸುಧಾರಿತ ಪಶುಸಂಗೋಪನಾ ಚಟುವಟಿಕೆಗಳ ಮೂಲಕ ಗ್ರಾಮೀಣ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಇಲಾಖೆಯು ಹೆಚ್ಚು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರೊಂದಿಗೆ ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ತಾಂತ್ರಿಕ ಇಲಾಖೆಯ ಸ್ಥಾನವನ್ನು ಪಡೆದಿರುತ್ತದೆ.

2018-19ನೇ ಸಾಲಿನ ಕಿರುಹೊತ್ತಿಗೆಯಲ್ಲಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಪ್ರತಿಬಿಂಬಿಸುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಈ ಕಿರುಹೊತ್ತಿಗೆಯನ್ನು ಇಲಾಖೆಯ ನಿರ್ದೇಶಕರಾದ ಡಾ. ಎಂ.ಟಿ. ಮಂಜುನಾಥ್ ಹಾಗೂ ಡಾ: ವಿ. ಮುನಿರಾಜು, ಜಂಟಿ ನಿರ್ದೇಶಕರು (ಅಂಕಿ-ಅಂಶ) ರವರ ಸಹಯೋಗದೊಂದಿಗೆ ತಯಾರಿಸಲಾಗಿರುತ್ತದೆ. ಇಲಾಖೆಯ ವಿವಿಧ ಕಾರ್ಯಗಳ ಪ್ರಗತಿಯನ್ನು ಬಿಂಬಿಸುವ ಈ ಕಿರುಹೊತ್ತಿಗೆಯನ್ನು ಹೊರತರಲು ಶ್ರಮವಹಿಸಿದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಹಾರ್ದಿಕ ಅಭಿನಂದನೆಗಳು ಹಾಗೂ ಧನ್ಯವಾದಗಳನ್ನು ತಿಳಿಸಲು ಬಯಸುತ್ತೇನೆ. ಈ ಕಿರುಹೊತ್ತಿಗೆಯ ಸುಧಾರಣೆ ಕುರಿತು ನೀಡುವ ಯಾವುದೇ ರಚನಾತ್ಮಕ ಸಲಹೆಗಳಿಗೆ ಸ್ವಾಗತ.

ಸ್ಥಳ : ಬೆಂಗಳೂರು **ಶ್ರೀ ಎಸ್.ಆರ್. ನಟೇಶ್,** ಭಾ.ಆ.ಸೇ.
ದಿನಾಂಕ : 26-11-2019 ಆಯುಕ್ತರು

# ಪ್ರಸ್ತಾವನೆ

ಪಶುಪಾಲನೆ ಮತ್ತು ಜಾನುವಾರು ರಂಗವು ಗ್ರಾಮೀಣ ಆರ್ಥಿಕತೆಯಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಇಲಾಖೆಯು ಭೂರಹಿತ ಬಡ ರೈತರಿಗೆ, ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹಾಗೂ ಮಹಿಳೆಯರಿಗೆ ಉದ್ಯೋಗಾವಕಾಶ ಒದಗಿಸುತ್ತಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಪ್ರಾಥಮಿಕ ವಲಯದಲ್ಲಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಾಲು ಹೆಚ್ಚಿನದ್ದಾಗಿರುತ್ತದೆ.

2018–19ನೇ ಸಾಲಿನ ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯನ್ನೊಳಗೊಂಡ **"ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖಾ ಪಕ್ಷಿನೋಟ–2019"**ನ್ನು ಹೊರತರಲಾಗಿದೆ. ಈ ವರದಿಯನ್ನು ಡಾ: ವಿ. ಮುನಿರಾಜು, ಜಂಟಿ ನಿರ್ದೇಶಕರು (ಅಂಕಿ–ಅಂಶ) ರವರು ಮಾನ್ಯ ಆಯುಕ್ತರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿರುತ್ತದೆ.

ಈ ಪಕ್ಷಿನೋಟವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಯಾವುದೇ ಸಲಹೆಗಳಿದ್ದಲ್ಲಿ ಸದಾ ಸ್ವಾಗತ.

ಸ್ಥಳ : ಬೆಂಗಳೂರು — **ಡಾ. ಎಂ.ಟಿ. ಮಂಜುನಾಥ್**
ದಿನಾಂಕ : 26–11–2019 — ನಿರ್ದೇಶಕರು

# ಪರಿವಿಡಿ


| ಕ್ರ. ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 1 | ಸಾಮಾನ್ಯ ಮಾಹಿತಿ | 1 |
| 2 | ಸಿಬ್ಬಂದಿ ವಿವರ | 2 |
| 3 | ಜಾನುವಾರುಗಳ ಸಂಖ್ಯೆ & ಜಾನುವಾರುಗಳನ್ನು ಹಾಗೂ ಕುಕ್ಕುಟಗಳನ್ನು ಹೊಂದಿರುವಂತಹ ಕುಟುಂಬ ಮತ್ತು ಕೌಟುಂಬಿಕ ಉದ್ಯಮಗಳ ಸಂಖ್ಯೆ (19ನೇ ಜಾನುವಾರು ಗಣತಿ–2012ರನ್ವಯ) | 3–4 |
| 4 | ಪಶುವೈದ್ಯಕೀಯ ಸೌಲಭ್ಯಗಳು | 4–5 |
| 5 | ಅನುದಾನ ಮತ್ತು ವೆಚ್ಚಗಳ ವಿವರ | 5 |
| 6 | 2018–19ನೇ ಸಾಲಿನಲ್ಲಿ ಇಲಾಖೆಯು ಸಾಧಿಸಿದ ಪ್ರಗತಿಯ ಘೋಷ್ವಾರೆ | 6 |
| 7 | ಪ್ರಧಾನ ವರ್ಗವಾರು ಹಾಗೂ ಲಿಂಗವಾರು ಭೂ ಹಿಡುವಳಿಗಳ ಸಂಖ್ಯೆ, ವಿಸ್ತೀರ್ಣ ಮತ್ತು ಸರಾಸರಿ ವಿಸ್ತೀರ್ಣದ ವಿವರಗಳು | 7 |
| 8 | ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಆದಾಯಕ್ಕೆ (GSDP) ಪಶುಪಾಲನಾ ವಲಯದ ಕೊಡುಗೆಯ ವಿವರ | 8 |
| 9 | ಮಾದರಿ ಸಮೀಕ್ಷೆ ಯೋಜನೆಯಡಿ 2018–19ನೇ ಸಾಲಿನಲ್ಲಿ ಅಂದಾಜಿಸಿದ ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆಯ ವಿವರ | 9 |

| ಕ್ರ. ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 10 | 2018–19ನೇ ಸಾಲಿನಲ್ಲಿ ವರ್ಗವಾರು ಜಾನುವಾರುಗಳು ಮತ್ತು ಕುಕ್ಕುಟಗಳನ್ನು ಹೊಂದಿರುವಂತಹ ಕುಟುಂಬಗಳ ಶೇಕಡಾವಾರು ಹಂಚಿಕೆಯ ವಿವರ | 10 |
| 11 | ಪ್ರಮುಖ ಜಾನುವಾರುಗಳ, ಜಾನುವಾರು ಉತ್ಪನ್ನಗಳ ಹಾಗೂ ಉಪ ಉತ್ಪನ್ನಗಳ ಅಂದಾಜು ಮೌಲ್ಯಗಳ ವಿವರ | 11–19 |
| 12 | 2014–15 ರಿಂದ 2018–19 ರವರೆಗೆ ಮಾದರಿ ಸಮೀಕ್ಷೆ ಯೋಜನೆಯಡಿಯಲ್ಲಿ ಅಂದಾಜಿಸಿದ ಹಾಲು, ಮಾಂಸ, ಮೊಟ್ಟೆ ಮತ್ತು ಉಣ್ಣೆ ಉತ್ಪಾದನೆಯ ವಿವರ | 20–21 |
| 13 | ತಲಾವಾರು ಸರಾಸರಿ ಹಾಲು, ಮೊಟ್ಟೆ ಹಾಗೂ ಮಾಂಸದ ಶಿಫಾರಸ್ಸು, ಲಭ್ಯತೆ ಮತ್ತು ವ್ಯತ್ಯಾಸಗಳ ವಿವರ | 22 |
| 14 | ಇಲಾಖೆಯ ಅಭಿವೃದ್ಧಿ ಕಾರ್ಯಚಟುವಟಿಕೆಗಳ ವಿವರ | 23–48 |
| 15 | ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಯೋಜನೆಗಳು ಹಾಗೂ ಸವಲತ್ತುಗಳ ವಿವರ | 48–73 |

| ಕ್ರ. ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 16 | ಇಲಾಖಾ ಗೌರವಾನ್ವಿತ ಸಚಿವರು ಮತ್ತು ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | 74–77 |
| 17 | ಜಿಲ್ಲಾ ಮಟ್ಟದ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | 78–83 |
| 18 | ಪಾಲಿಕ್ಲಿನಿಕ್ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | 84–89 |
| 19 | ಕಾರ್ಯಯೋಜನೆ ಮತ್ತು ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | 90–107 |
| 20 | ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿಯ ಅಧಿಕಾರಿಗಳು/ವ್ಯವಸ್ಥಾಪಕ ನಿರ್ದೇಶಕರುಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | 108–112 |
| 21 | ಸಮಗ್ರ ಮಾದರಿ ಸಮೀಕ್ಷೆ ಯೋಜನೆಯಡಿ ವಿಭಾಗ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾರಕರುಗಳ ವಿವರ | 113 |
| 22 | ತರಬೇತಿ ಕೇಂದ್ರಗಳ ವಿವರ | 114–125 |

## ಅ. ಸಾಮಾನ್ಯ ಮಾಹಿತಿ :

| | | |
|---|---|---|
| ಒಟ್ಟು ಜಿಲ್ಲೆಗಳು | | 30 |
| ಒಟ್ಟು ತಾಲ್ಲೂಕುಗಳು | | 226 |
| ಒಟ್ಟು ಹೋಬಳಿಗಳು | | 769 |
| ಒಟ್ಟು ಗ್ರಾಮ ಪಂಚಾಯತಿಗಳು | | 6019 |
| ಒಟ್ಟು ಗ್ರಾಮಗಳು | | 29340 |
| ಜನವಸತಿ ಇರುವ ಗ್ರಾಮಗಳು | | 27397 |
| ಜನವಸತಿ ಇಲ್ಲದ ಗ್ರಾಮಗಳು | | 1943 |
| ಒಟ್ಟು ನಗರ/ ಪಟ್ಟಣಗಳು | | 347 |
| ಒಟ್ಟು ವಾರ್ಡ್‌ಗಳು | | 4786 |
| ವಿಸ್ತೀರ್ಣ (ಚದರ ಕಿ.ಮೀ.ಗಳಲ್ಲಿ) | | 191791 |
| ಒಟ್ಟು ಜನಸಂಖ್ಯೆ (2011ರ ಜನಗಣತಿ) | ಗಂಡು | 30966657 |
| | ಹೆಣ್ಣು | 30128640 |
| | ಒಟ್ಟು | 61095297 |
| ಗ್ರಾಮಾಂತರ (2011ರ ಜನಗಣತಿ) | | 37469335 |
| ನಗರ (2011ರ ಜನಗಣತಿ) | | 23625962 |
| ಲಿಂಗಾನುಪಾತ (2011ರ ಜನಗಣತಿ) | | 973 |
| ಬೆಳವಣಿಗೆಯ ದರ (2001–2011) | | 15.6 |

| | | |
|---|---|---|
| ಶೇಕಡಾವಾರು ಸಾಕ್ಷರತೆ (2011ರ ಜನಗಣತಿ) | ಪುರುಷ | 82.5 |
| | ಮಹಿಳೆ | 68.1 |
| | ಒಟ್ಟು | 75.4 |
| ಪರಿಶಿಷ್ಟ ಜಾತಿ ಜನಸಂಖ್ಯೆ (2011ರ ಜನಗಣತಿ) | | 10474992 |
| ಪರಿಶಿಷ್ಟ ಪಂಗಡ ಜನಸಂಖ್ಯೆ (2011ರ ಜನಗಣತಿ) | | 4248987 |
| ಸಾಗುವಳಿಗಾರರು (2011ರ ಜನಗಣತಿ) | | 6580649 |
| ವ್ಯವಸಾಯ ಕೂಲಿಗಾರರು (2011ರ ಜನಗಣತಿ) | | 7155963 |
| ಒಟ್ಟು ಜಾನುವಾರುಗಳ ಸಂಖ್ಯೆ (2012 ರ ಜಾನುವಾರು ಗಣತಿ) | | 29000784 |
| ಗ್ರಾಮಾಂತರ ಜಾನುವಾರುಗಳ ಸಂಖ್ಯೆ(2012 ರ ಜಾನುವಾರು ಗಣತಿ) | | 27695199 |
| ನಗರ ಜಾನುವಾರುಗಳ ಸಂಖ್ಯೆ (2012 ರ ಜಾನುವಾರು ಗಣತಿ) | | 1305585 |

## ಆ. ಸಿಬ್ಬಂದಿ ವಿವರಣೆ : (31–03–2019 ರಲ್ಲಿದ್ದಂತೆ)

| ವರ್ಗ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ |
|---|---|---|
| 'ಎ' ಗುಂಪು | 3432 | 2285 |
| 'ಬಿ' ಗುಂಪು | 273 | 195 |
| 'ಸಿ' ಗುಂಪು | 7439 | 5074 |
| 'ಡಿ' ಗುಂಪು | 7418 | 2698 |
| ಒಟ್ಟು | 18562 | 10252 |

## ಇ. ಜಾನುವಾರುಗಳ ಸಂಖ್ಯೆ (19ನೇ ಜಾನುವಾರು ಗಣತಿ–2012ರನ್ವಯ)

| **ಜಾನುವಾರು** | **ಸಂಖ್ಯೆ** |
|---|---:|
| ದನಗಳು | 9516484 |
| ಎಮ್ಮೆಗಳು | 3470505 |
| ಕುರಿಗಳು | 9583761 |
| ಮೇಕೆಗಳು | 4796147 |
| ಕುದುರೆಗಳು ಮತ್ತು ಚಿಕ್ಕಕುದುರೆಗಳು | 12976 |
| ಹೇಸರಗತ್ತೆಗಳು | 762 |
| ಕತ್ತೆಗಳು | 16312 |
| ಒಂಟೆಗಳು | 151 |
| ಹಂದಿಗಳು | 304798 |
| ನಾಯಿಗಳು | 1275122 |
| ಮೊಲಗಳು | 23558 |
| ಆನೆಗಳು | 208 |
| **ಒಟ್ಟು ಜಾನುವಾರುಗಳು** | **29000784** |
| **ಒಟ್ಟು ಕುಕ್ಕುಟಗಳು** | **53442030** |

## ಜಾನುವಾರುಗಳನ್ನು ಹಾಗೂ ಕುಕ್ಕುಟಗಳನ್ನು ಹೊಂದಿರುವಂತಹ ಕುಟುಂಬ ಮತ್ತು ಕೌಟುಂಬಿಕ ಉದ್ಯಮಗಳ ಸಂಖ್ಯೆ (19ನೇ ಜಾನುವಾರು ಗಣತಿ – 2012ರನ್ವಯ)

| ಕುಟುಂಬವಾರು ಮತ್ತು ಕೌಟುಂಬಿಕ ಉದ್ಯಮಗಳ ಸಂಖ್ಯೆ | | | | | | |
|---|---|---|---|---|---|---|
| ದನಗಳು | ಎಮ್ಮೆಗಳು | ಮೇಕೆಗಳು | ಕುರಿಗಳು | ಹಂದಿಗಳು | ಹಿತ್ತಲ ಕುಕ್ಕುಟಗಳು | ಕುಕ್ಕುಟ ಕ್ಷೇತ್ರ ಮತ್ತು ಹ್ಯಾಚರೀಸ್ |
| 2975805 | 1317403 | 714979 | 533266 | 21304 | 1090311 | 152712 |

## ಈ. ಪಶುವೈದ್ಯಕೀಯ ಸೌಲಭ್ಯಗಳು (31–03–2019 ರಲ್ಲಿದ್ದಂತೆ)

### 1. ಪಶುವೈದ್ಯಕೀಯ ಸಂಸ್ಥೆಗಳು (ಸೇವೆಗಳು)

| | | |
|---|---|---|
| 1 | ಜಿಲ್ಲಾ ಪಾಲಿಕ್ಲಿನಿಕ್‌ಗಳು | 30 |
| 2 | ಪಶುವೈದ್ಯಕೀಯ ಆಸ್ಪತ್ರೆಗಳು | 665 |
| 3 | ಪಶುವೈದ್ಯಕೀಯ ಚಿಕಿತ್ಸಾಲಯಗಳು | 2135 |
| 4 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು | 1206 |
| 5 | ಸಂಚಾರಿ ಪಶುಚಿಕಿತ್ಸಾಲಯಗಳು | 176 |
| | **ಒಟ್ಟು** | **4212** |

## 2. ಪಶುವೈದ್ಯ ಕ್ಷೇತ್ರಗಳು/ತರಬೇತಿ ಕೇಂದ್ರಗಳು

| | | |
|---|---|---|
| 1 | ದನ ಮತ್ತು ಎಮ್ಮೆಗಳ ಜಾನುವಾರು ತಳಿ ಸಂವರ್ಧನಾ ಕ್ಷೇತ್ರ ಮತ್ತು ತರಬೇತಿ ಕೇಂದ್ರಗಳು | 11 |
| 2 | ಕುರಿ ತಳಿ ಸಂವರ್ಧನಾ ಕ್ಷೇತ್ರ | 5 |
| 3 | ಹಂದಿ ತಳಿ ಸಂವರ್ಧನಾ ಕ್ಷೇತ್ರ | 5 |
| 4 | ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳು | 3 |
| 5 | ಮೂಲ ಸಾಕಾಣಿಕೆ ಕೇಂದ್ರಗಳು | 3 |
| 6 | ಕುಕ್ಕುಟ ಕ್ಷೇತ್ರಗಳು | 24 |
| 7 | ಘನೀಕೃತ ವೀರ್ಯ ಬ್ಯಾಂಕ್‌ಗಳು | 2 |
| 8 | ಸೇವಾ ನಿರತ ಸಿಬ್ಬಂದಿ ತರಬೇತಿ ಕೇಂದ್ರಗಳು | 9 |

## ಉ. ಅನುದಾನ ಮತ್ತು ವೆಚ್ಚದ ವಿವರ

(ರೂ. ಲಕ್ಷಗಳಲ್ಲಿ)

| ವಿವರ | 2018–19 | | 2019–20 |
|---|---|---|---|
| | ಅನುದಾನ (ಪರಿಷ್ಕೃತ ಅಂದಾಜು) | ವೆಚ್ಚ | ಅನುದಾನ |
| ಯೋಜನಾ ಕಾರ್ಯಕ್ರಮ | 268260.53 | 255800.23 | 262554.53 |

## ಊ. 2018–19 ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ

(ಸಂಖ್ಯೆಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮ | ಇಲಾಖಾ ವತಿಯಿಂದ ಸಾಧಿಸಿದ ಪ್ರಗತಿ |
|---|---|---|
| 1 | ಕೃತಕ ಗರ್ಭಧಾರಣೆ | 3016537 |
| 2 | ಕೃತಕ ಗರ್ಭಧಾರಣೆಯಿಂದ ಗರ್ಭಧರಿಸಿದ ಪ್ರಾಣಿಗಳ ಸಂಖ್ಯೆ | 1243058 |
| 3 | ಕರುಗಳ ಜನನ | 747986 |
| 4 | ಕಸಿ ಮಾಡಿದ ಪ್ರಾಣಿಗಳ ಸಂಖ್ಯೆ | 1539527 |
| 5 | ಚಿಕಿತ್ಸೆ ನೀಡಿದ ಪ್ರಾಣಿಗಳ ಸಂಖ್ಯೆ | 14653465 |
| 6 | ಲಸಿಕೆ ಹಾಕಿದ ಪ್ರಾಣಿಗಳ ಸಂಖ್ಯೆ | 80319679 |
| 7 | ರೋಗ ತಗುಲಿದ ಪ್ರಾಣಿಗಳ ಸಂಖ್ಯೆ | 75 |
| 8 | ರೋಗ ಹರಡಿದ ಪ್ರಾಣಿಗಳ ಸಂಖ್ಯೆ | 4480 |
| 9 | ರೋಗದಿಂದ ಸತ್ತ ಪ್ರಾಣಿಗಳ ಸಂಖ್ಯೆ | 354 |

## ಋ. ಪ್ರಧಾನ ವರ್ಗವಾರು ಹಾಗೂ ಲಿಂಗವಾರು ಭೂ ಹಿಡುವಳಿಗಳ ಸಂಖ್ಯೆ, ವಿಸ್ತೀರ್ಣ ಮತ್ತು ಸರಾಸರಿ ವಿಸ್ತೀರ್ಣದ ವಿವರಗಳು

**(2010–11 ನೇ ಸಾಲಿನ ಕೃಷಿ ಗಣತಿಯ ಪ್ರಕಾರ)**

| ವರ್ಗ | ಒಟ್ಟು ಹಿಡುವಳಿಗಳು ('000 ಗಳಲ್ಲಿ) | | | ಭೂ ಬಳಕೆಯ ವಿಸ್ತೀರ್ಣ ('000 ಹೆಕ್ಟೇರ್‌ಗಳಲ್ಲಿ) | | | ಸರಾಸರಿ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | | |
|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು* | ಗಂಡು | ಹೆಣ್ಣು | ಒಟ್ಟು* | ಗಂಡು | ಹೆಣ್ಣು | ಒಟ್ಟು* |
| ಅತಿ ಸಣ್ಣ (<1 ಹೆ.) | 2988 | 855 | 3849 | 1478 | 371 | 1851 | 0.49 | 0.43 | 0.48 |
| ಸಣ್ಣ (1–2 ಹೆ.) | 1771 | 365 | 2138 | 2503 | 514 | 3020 | 1.41 | 1.41 | 1.41 |
| ಅರೆ ಮಧ್ಯಮ (2–4 ಹೆ.) | 1075 | 190 | 1267 | 2882 | 506 | 3393 | 2.68 | 2.66 | 2.68 |
| ಮಧ್ಯಮ (4–10 ಹೆ) | 441 | 68 | 511 | 2511 | 383 | 2904 | 5.69 | 5.65 | 5.69 |
| ದೊಡ್ಡ (>=10ಹೆ.) | 58 | 8 | 67 | 816 | 124 | 994 | 14.12 | 14.59 | 14.71 |
| **ಒಟ್ಟು ವರ್ಗದ** | **6333** | **1486** | **7832** | **10190** | **1898** | **12162** | **1.61** | **1.28** | **1.55** |

* ಇದರಲ್ಲಿ ಸಂಘ ಸಂಸ್ಥೆಗಳ ಮಾಹಿತಿ ಒಳಗೊಂಡಿದೆ.

**೩೦. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಆದಾಯ (Gross State Domestic Product) (GSDP)ಕ್ಕೆ ಪಶುಪಾಲನಾ ವಲಯದಿಂದ ಶೇಕಡಾವಾರು ಕೊಡುಗೆಯ ವಿವರಗಳು.**

| ವಲಯ | ಉತ್ಪಾದನೆಯ ಮೌಲ್ಯ (ಶೇಕಡವಾರು) | | |
|---|---|---|---|
| | 2016–17 | 2017–18 | 2018–19 |
| | ಪ್ರಚಲಿತ ಬೆಲೆಗಳಲ್ಲಿ | ಪ್ರಚಲಿತ ಬೆಲೆಗಳಲ್ಲಿ | ಪ್ರಚಲಿತ ಬೆಲೆಗಳಲ್ಲಿ |
| ಪಶುಪಾಲನಾ ಕಾರ್ಯಕ್ರಮಗಳಿಂದ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಆದಾಯ | 19.57 | 18.34 | 20.07 |
| ಪಶುಪಾಲನಾ ಕಾರ್ಯಕ್ರಮಗಳಿಂದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಆದಾಯ (ಜಿ.ಎಸ್.ಡಿ.ಪಿ.) | 2.21 | 2.14 | 2.03 |

**ಎ. ಮಾದರಿ ಸಮೀಕ್ಷೆ ಯೋಜನೆ 2018–19ನೇ ಸಾಲಿನಲ್ಲಿ ಅಂದಾಜಿಸಿದ ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆಗಳ ವಿವರ.**

| ಕ್ರ. ಸಂ. | ವಿವರ | | ಪ್ರಮಾಣ | ಅಂದಾಜು ಮಾಡಲಾದ ಉತ್ಪಾದನೆ (ಕೆ.ಜಿ.ಗಳಲ್ಲಿ) |
|---|---|---|---|---|
| 1 | **ಹಾಲು** | | | |
| | ಅ. | ಮಿಶ್ರತಳಿ ಹಸು | ಕೋಟಿಗಳಲ್ಲಿ | 459 |
| | ಆ. | ಸ್ಥಳೀಯ ಹಸು | ಕೋಟಿಗಳಲ್ಲಿ | 83 |
| | ಇ. | ವರ್ಗೀಕರಿಸಲಾಗದ ಹಸು | ಕೋಟಿಗಳಲ್ಲಿ | 50 |
| | ಈ. | ಸ್ಥಳೀಯ ಎಮ್ಮೆ | ಕೋಟಿಗಳಲ್ಲಿ | 108 |
| | ಉ. | ವರ್ಗೀಕರಿಸಲಾಗದ ಎಮ್ಮೆ | ಕೋಟಿಗಳಲ್ಲಿ | 79 |
| | ಊ. | ಮೇಕೆ | ಕೋಟಿಗಳಲ್ಲಿ | 11 |
| | | **ಒಟ್ಟು** | **ಕೋಟಿಗಳಲ್ಲಿ** | **790** |
| **2** | **ಮೊಟ್ಟೆ** | | **ಕೋಟಿ (ಸಂಖ್ಯೆಗಳಲ್ಲಿ)** | **600** |
| **3** | **ಮಾಂಸ** | | **ಕೋಟಿಗಳಲ್ಲಿ** | **25** |
| **4** | **ಉಣ್ಣೆ** | | **ಲಕ್ಷಗಳಲ್ಲಿ** | **31** |

**ಏ. ಜಾನುವಾರುಗಳು ಮತ್ತು ಕುಕ್ಕುಟಗಳನ್ನು ಹೊಂದಿರುವಂತಹ ಕುಟುಂಬಗಳ ಶೇಕಡಾವಾರು ಹಂಚಿಕೆ ವಿವರಗಳು.**

| ವರ್ಗ | ಜಾನುವಾರುಗಳು | ಕುಕ್ಕುಟಗಳು |
|---|---|---|
| 1–5 | 92.53 | 93.31 |
| 6–10 | 5.43 | 3.79 |
| 11–15 | 1.39 | 1.94 |
| 16–20 | 0.44 | 0.62 |
| 21–25 | 0.14 | 0.19 |
| 26 & ಮೇಲ್ಪಟ್ಟವು | 0.07 | 0.15 |
| **ಒಟ್ಟು** | **100.00** | **100.00** |

## ಐ. ಪ್ರಮುಖ ಜಾನುವಾರುಗಳ, ಜಾನುವಾರು ಉತ್ಪನ್ನಗಳ ಹಾಗೂ ಉಪ ಉತ್ಪನ್ನಗಳ ಅಂದಾಜು ಮೌಲ್ಯ

| ಕ್ರ. ಸಂ. | ಪ್ರಾಣಿಗಳ ವರ್ಗ | 2012 ನೇ ಜಾನುವಾರು ಗಣತಿಯನ್ವಯ ಜಾನುವಾರುಗಳ ಸಂಖ್ಯೆ | ಪ್ರತಿ ಪ್ರಾಣಿಯ ದರ (ರೂಗಳಲ್ಲಿ) | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|
| **I. ಜಾನುವಾರುಗಳ ಮೌಲ್ಯ :** | | | | |
| **ಎ. ಮಿಶ್ರತಳಿ ಮತ್ತು ವಿದೇಶಿತಳಿ ದನಗಳು** | | | | |
| 1 | ಗಂಡು 1½ ವರ್ಷದವರೆಗೆ | 159630 | 7000 | 11174 |
| 2 | ಗಂಡು 1½ ವರ್ಷಕ್ಕಿಂತ ಮೇಲ್ಪಟ್ಟವು | 45552 | 12500 | 5694 |
| 3 | ಹೆಣ್ಣು 1 ವರ್ಷ ಒಳಗಿನವು | 524390 | 15000 | 78659 |
| 4 | ಹೆಣ್ಣು 1 ವರ್ಷದಿಂದ 2½ ವರ್ಷದವರೆಗೆ | 353977 | 40000 | 141591 |
| 5 | ಹೆಣ್ಣು 2½ ವರ್ಷಕ್ಕಿಂತ ಮೇಲ್ಪಟ್ಟವು | 1828968 | 50000 | 914484 |
| | **ಒಟ್ಟು** | **2912517** | – | **1151602** |
| **ಬಿ. ಸ್ಥಳೀಯ ದನಗಳು:** | | | | |
| 1 | ಗಂಡು 2 ವರ್ಷದವರೆಗೆ | 496719 | 25000 | 124180 |
| 2 | ಗಂಡು 2 ವರ್ಷಕ್ಕಿಂತ ಮೇಲ್ಪಟ್ಟವು | 2275155 | 35000 | 796304 |
| 3 | ಹೆಣ್ಣು 1 ವರ್ಷ ಒಳಗಿನವು | 700377 | 10000 | 70038 |
| 4 | ಹೆಣ್ಣು 1 ವರ್ಷದಿಂದ 3 ವರ್ಷದವರೆಗೆ | 591298 | 20000 | 118260 |
| 5 | ಹೆಣ್ಣು 3 ವರ್ಷಕ್ಕಿಂತ ಮೇಲ್ಪಟ್ಟವು | 2540418 | 30000 | 762125 |
| | **ಒಟ್ಟು** | **6603967** | – | **1870907** |

**ಮುಂದುವರೆದಿದೆ......**

| ಕ್ರ ಸಂ. | ಪ್ರಾಣಿಗಳ ವರ್ಗ | 2012 ನೇ ಜಾನುವಾರು ಗಣತಿಯನ್ವಯ ಜಾನುವಾರುಗಳ ಸಂಖ್ಯೆ | ಪ್ರತಿ ಪ್ರಾಣಿಯ ದರ (ರೂಗಳಲ್ಲಿ) | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|
| **ಸಿ. ಎಮ್ಮೆಗಳು :** | | | | |
| 1 | ಗಂಡು 2 ವರ್ಷದವರೆಗೆ | 292673 | 8000 | 23414 |
| 2 | ಗಂಡು 2 ವರ್ಷಕ್ಕಿಂತ ಮೇಲ್ಪಟ್ಟವು | 67701 | 18000 | 12186 |
| 3 | ಹೆಣ್ಣು 1 ವರ್ಷ ಒಳಗಿನವು | 641309 | 12000 | 76957 |
| 4 | ಹೆಣ್ಣು 1 ವರ್ಷದಿಂದ 3 ವರ್ಷದವರೆಗೆ | 413078 | 22000 | 90877 |
| 5 | ಹೆಣ್ಣು 3 ವರ್ಷಕ್ಕಿಂತ ಮೇಲ್ಪಟ್ಟವು | 2055744 | 35000 | 719510 |
| | **ಒಟ್ಟು** | **3470505** | – | **922944** |
| **ಡಿ. ಕುರಿಗಳು :** | | | | |
| 1 | ಗಂಡು 1 ವರ್ಷ ಒಳಗಿನವು | 1025429 | 6000 | 61526 |
| 2 | ಗಂಡು 1 ವರ್ಷ ಮತ್ತು ಮೇಲ್ಪಟ್ಟವು | 903359 | 12000 | 108403 |
| 3 | ಹೆಣ್ಣು 1 ವರ್ಷ ಒಳಗಿನವು | 1977309 | 6000 | 118639 |
| 4 | ಹೆಣ್ಣು 1 ವರ್ಷ ಮತ್ತು ಮೇಲ್ಪಟ್ಟವು | 5677664 | 12000 | 681320 |
| | **ಒಟ್ಟು** | **9583761** | – | **969888** |
| **ಇ. ಮೇಕೆಗಳು :** | | | | |
| 1 | ಗಂಡು 1 ವರ್ಷ ಒಳಗಿನವು | 576480 | 5000 | 28824 |
| 2 | ಗಂಡು 1 ವರ್ಷ ಮತ್ತು ಮೇಲ್ಪಟ್ಟವು | 511723 | 12000 | 61407 |
| 3 | ಹೆಣ್ಣು 1 ವರ್ಷ ಒಳಗಿನವು | 964334 | 5000 | 48217 |
| 4 | ಹೆಣ್ಣು 1 ವರ್ಷ ಮತ್ತು ಮೇಲ್ಪಟ್ಟವು | 2743610 | 10000 | 274361 |
| | **ಒಟ್ಟು** | **4796147** | – | **412809** |

**ಮುಂದುವರೆದಿದೆ......**

| ಕ್ರ ಸಂ. | ಪ್ರಾಣಿಗಳ ವರ್ಗ | 2012 ನೇ ಜಾನುವಾರು ಗಣತಿಯನ್ವಯ ಜಾನುವಾರುಗಳ ಸಂಖ್ಯೆ | ಪ್ರತಿ ಪ್ರಾಣಿಯ ದರ (ರೂಗಳಲ್ಲಿ) | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|
| **ಎಫ್. ಹಂದಿಗಳು:** | | | | |
| 1 | ಗಂಡು 6 ತಿಂಗಳ ಒಳಗಿನವು | 50125 | 3000 | 1504 |
| 2 | ಗಂಡು 6 ತಿಂಗಳ ಮತ್ತು ಮೇಲ್ಪಟ್ಟವು | 57289 | 10000 | 5729 |
| 3 | ಹೆಣ್ಣು 6 ತಿಂಗಳ ಒಳಗಿನವು | 74878 | 3000 | 2246 |
| 4 | ಹೆಣ್ಣು 6 ತಿಂಗಳ ಮತ್ತು ಮೇಲ್ಪಟ್ಟವು | 122506 | 10000 | 12251 |
| | **ಒಟ್ಟು** | **304798** | **–** | **21730** |
| **ಜಿ.** | **ಕತ್ತೆಗಳು** | **16312** | **6500** | **1060** |
| **ಹೆಚ್.** | **ಹಿತ್ತಲ ಕುಕ್ಕುಟ** | **9700025** | **550** | **53350** |
| **ಐ.** | **ಕ್ಷೇತ್ರ ಕುಕ್ಕುಟಗಳು** | **43742005** | **275** | **120291** |
| | **ಒಟ್ಟು** | **53458342** | **–** | **174701** |
| | **ಜಾನುವಾರುಗಳ ಒಟ್ಟು ಮೌಲ್ಯ(ಎ+ಬಿ+ಸಿ+ಡಿ+ಇ+ಎಫ್+ಜಿ+ಹೆಚ್+ಐ)** | | | **5524581** |

**ಮುಂದುವರೆದಿದೆ......**

## ಪ್ರಮುಖ ಜಾನುವಾರುಗಳ, ಜಾನುವಾರು ಉತ್ಪನ್ನಗಳ ಹಾಗೂ ಉಪ ಉತ್ಪನ್ನಗಳ ಅಂದಾಜು ಮೌಲ್ಯ

### II. ಪ್ರಾಣಿ ಶಕ್ತಿ ಮೌಲ್ಯ :

| ಕ್ರ. ಸಂ | ಪ್ರಾಣಿಗಳ ವರ್ಗ | 2012 ನೇ ಜಾನುವಾರು ಗಣತಿಯ ಪ್ರಕಾರ ಜಾನುವಾರುಗಳ ಸಂಖ್ಯೆ | ಪ್ರತಿ ಪ್ರಾಣಿಯ ದರ (ರೂ.ಗಳಲ್ಲಿ) | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | 1 ½ ವರ್ಷಕ್ಕಿಂತ ಮೇಲ್ಪಟ್ಟ ಮಿಶ್ರತಳಿ ಮತ್ತು ವಿದೇಶಿ ತಳಿ ಗಂಡು ದನಗಳು | 45552 | – | 2186 |
| 2 | 2 ವರ್ಷಕ್ಕಿಂತ ಮೇಲ್ಪಟ್ಟ ಸ್ಥಳೀಯ ಗಂಡು ದನಗಳು | 2275155 | – | 109207 |
| 3 | 2 ವರ್ಷಕ್ಕಿಂತ ಮೇಲ್ಪಟ್ಟ ಕೋಣಗಳು | 67701 | – | 3250 |
| | **ಒಟ್ಟು** | **2388408** | – | **114643** |

ಮುಂದುವರೆದಿದೆ......

## III. ಅ. ಜಾನುವಾರು ಉತ್ಪನ್ನಗಳು :

| ಕ್ರ. ಸಂ. | ವರ್ಗ | ಉತ್ಪಾದನೆಯ ಅಂದಾಜು 2018–19 | ಪ್ರಮಾಣ | ದರ (ರೂ. ಗಳಲ್ಲಿ) | ಪ್ರಮಾಣ | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| ಎ. ಹಾಲು: | | | | | | |
| 1 | ಹಸು | 5918337 | ಟನ್‌ಗಳಲ್ಲಿ | 35 | ಪ್ರತಿ ಲೀ. | 2071418 |
| 2 | ಎಮ್ಮೆ | 1869068 | ಟನ್‌ಗಳಲ್ಲಿ | 45 | ಪ್ರತಿ ಲೀ. | 841081 |
| 3 | ಮೇಕೆ | 113204 | ಟನ್‌ಗಳಲ್ಲಿ | 60 | ಪ್ರತಿ ಲೀ. | 67922 |
| | **ಒಟ್ಟು** | **7900609** | **ಟನ್‌ಗಳಲ್ಲಿ** | – | – | **2980421** |
| ಬಿ. ಮಾಂಸ: | | | | | | |
| 1 | ದನ | 16912 | ಟನ್‌ಗಳಲ್ಲಿ | 160 | ಪ್ರತಿ ಕಿ.ಗ್ರಾಂ | 27059 |
| 2 | ಎಮ್ಮೆ | 11593 | ಟನ್‌ಗಳಲ್ಲಿ | 160 | ಪ್ರತಿ ಕಿ.ಗ್ರಾಂ | 18549 |
| 3 | ಕುರಿ | 47418 | ಟನ್‌ಗಳಲ್ಲಿ | 550 | ಪ್ರತಿ ಕಿ.ಗ್ರಾಂ | 260799 |
| 4 | ಮೇಕೆ | 32403 | ಟನ್‌ಗಳಲ್ಲಿ | 550 | ಪ್ರತಿ ಕಿ.ಗ್ರಾಂ | 178217 |
| 5 | ಹಂದಿ | 6096 | ಟನ್‌ಗಳಲ್ಲಿ | 180 | ಪ್ರತಿ ಕಿ.ಗ್ರಾಂ | 10973 |
| 6 | ಕೋಳಿ | 139182 | ಟನ್‌ಗಳಲ್ಲಿ | 180 | ಪ್ರತಿ ಕಿ.ಗ್ರಾಂ | 250528 |
| | **ಒಟ್ಟು** | **253604** | **ಟನ್‌ಗಳಲ್ಲಿ** | – | – | **746125** |
| **ಸಿ. ಮೊಟ್ಟೆ** | | **59994** | **ಲಕ್ಷಗಳಲ್ಲಿ** | **675** | **100 ಕ್ಕೆ** | **404960** |
| **ಡಿ. ಉಣ್ಣೆ** | | **3058** | **ಟನ್‌ಗಳಲ್ಲಿ** | **25** | **ಪ್ರತಿ ಕಿ.ಗ್ರಾಂ.** | **765** |
| **ಜಾನುವಾರು ಉತ್ಪನ್ನಗಳ ಮೌಲ್ಯ (ಎ+ಬಿ+ಸಿ+ಡಿ)** | | | | | | **4132271** |

**ಮುಂದುವರೆದಿದೆ......**

## ಪ್ರಮುಖ ಜಾನುವಾರುಗಳ, ಜಾನುವಾರು ಉತ್ಪನ್ನಗಳ ಹಾಗೂ ಉಪ ಉತ್ಪನ್ನಗಳ ಅಂದಾಜು ಮೌಲ್ಯ

### ಆ. ಜಾನುವಾರು ಉಪ ಉತ್ಪನ್ನಗಳು :

### ಎ. ಚರ್ಮ :

| ಕ್ರ. ಸಂ. | ವರ್ಗ | ವಧೆ ಮಾಡಿದ ಪ್ರಾಣಿಗಳ ಸಂಖ್ಯೆ | ಪ್ರಮಾಣ | ದರ (ರೂ. ಗಳಲ್ಲಿ) | ಪ್ರಮಾಣ | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| 1 | ದನ | **150216** | ಸಂಖ್ಯೆಗಳಲ್ಲಿ | **550** | ಪ್ರತಿ ಪ್ರಾಣಿಗೆ | 826 |
| 2 | ಎಮ್ಮೆ | **88080** | ಸಂಖ್ಯೆಗಳಲ್ಲಿ | **550** | ಪ್ರತಿ ಪ್ರಾಣಿಗೆ | 484 |
| 3 | ಕುರಿ | **3163642** | ಸಂಖ್ಯೆಗಳಲ್ಲಿ | **275** | ಪ್ರತಿ ಪ್ರಾಣಿಗೆ | 8700 |
| 4 | ಮೇಕೆ | **2275576** | ಸಂಖ್ಯೆಗಳಲ್ಲಿ | **275** | ಪ್ರತಿ ಪ್ರಾಣಿಗೆ | 6258 |
| | **ಒಟ್ಟು** | **5677514** | **ಸಂಖ್ಯೆಗಳಲ್ಲಿ** | – | – | **16268** |

ಮುಂದುವರೆದಿದೆ......

## ಬಿ. ಸಗಣಿ :

| ಕ್ರ. ಸಂ. | ವರ್ಗ | ಉತ್ಪಾದನೆಯ ಅಂದಾಜು | ಪ್ರಮಾಣ | ದರ (ರೂ. ಗಳಲ್ಲಿ) | ಪ್ರಮಾಣ | ಒಟ್ಟು ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| 1 | ದನ | **20841099** | ಟನ್‌ಗಳಲ್ಲಿ | **2500** | ಪ್ರತಿ ಟನ್‌ಗೆ | 521027 |
| 2 | ಎಮ್ಮೆ | **7600405** | ಟನ್‌ಗಳಲ್ಲಿ | **2500** | ಪ್ರತಿ ಟನ್‌ಗೆ | 190010 |
| 3 | ಕುರಿ | **1749036** | ಟನ್‌ಗಳಲ್ಲಿ | **3500** | ಪ್ರತಿ ಟನ್‌ಗೆ | 61216 |
| 4 | ಮೇಕೆ | **875296** | ಟನ್‌ಗಳಲ್ಲಿ | **3500** | ಪ್ರತಿ ಟನ್‌ಗೆ | 30635 |
| 5 | ಹಂದಿ | **333753** | ಟನ್‌ಗಳಲ್ಲಿ | **2000** | ಪ್ರತಿ ಟನ್‌ಗೆ | 6675 |
| 6 | ಕುಕ್ಕುಟ | **780253** | ಟನ್‌ಗಳಲ್ಲಿ | **3250** | ಪ್ರತಿ ಟನ್‌ಗೆ | 25358 |
| | | | | | **ಒಟ್ಟು** | **834921** |
| | | | | | **ಜಾನುವಾರು ಉಪ ಉತ್ಪನ್ನಗಳ ಮೌಲ್ಯ(ಎ+ಬಿ)** | **851189** |

**ಮುಂದುವರೆದಿದೆ......**

## IV. ಪ್ರಮುಖ ಜಾನುವಾರುಗಳ ಅಂದಾಜು ಮೌಲ್ಯ ಹಾಗೂ ಜಾನುವಾರು ಉತ್ಪನ್ನಗಳ ಅಂದಾಜು ಆದಾಯ (ಸಂಕ್ಷಿಪ್ತ)

| ಕ್ರ. ಸಂ. | ವಿವರಗಳು | ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|
| **I.** | **ಜಾನುವಾರುಗಳ ಮೌಲ್ಯ :** | |
| 1 | ಮಿಶ್ರತಳಿ ಮತ್ತು ವಿದೇಶಿ ದನಗಳು | 1151602 |
| 2 | ಸ್ಥಳೀಯ ದನಗಳು | 1870907 |
| 3 | ಎಮ್ಮೆಗಳು | 922944 |
| 4 | ಕುರಿಗಳು | 969888 |
| 5 | ಮೇಕೆಗಳು | 412809 |
| 6 | ಹಂದಿಗಳು | 21730 |
| 7 | ಕತ್ತೆಗಳು | 1060 |
| 8 | ಹಿತ್ತಲ ಕುಕ್ಕುಟ ಮತ್ತು ಕ್ಷೇತ್ರ ಕುಕ್ಕುಟಗಳು | 173641 |
| | **ಒಟ್ಟು** | **5524581** |
| **II.** | **ಪ್ರಾಣಿ ಶಕ್ತಿ ಮೌಲ್ಯ :** | **114643** |
| | **ಒಟ್ಟು ಮೌಲ್ಯ(I + II)** | **5639224** |

| ಕ್ರ. ಸಂ. | ವಿವರಗಳು | ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|
| **III.** ಅ) ಜಾನುವಾರುಗಳ ಉತ್ಪನ್ನಗಳು : | | |
| 1 | ಹಾಲು | 2980421 |
| 2 | ಮಾಂಸ | 746125 |
| 3 | ಮೊಟ್ಟೆ | 404960 |
| 4 | ಉಣ್ಣೆ | 765 |
| | **ಒಟ್ಟು** | **4132271** |
| ಆ) ಜಾನುವಾರುಗಳ ಉಪಉತ್ಪನ್ನಗಳು : | | |
| 1 | ಚರ್ಮ | 16268 |
| 2 | ಸಗಣಿ | 834921 |
| | **ಒಟ್ಟು** | **851189** |
| | **ಒಟ್ಟು ಆದಾಯ (III ಅ + III ಆ)** | **4983460** |
| | **ಒಟ್ಟು ಸಂಪತ್ತು ಮೌಲ್ಯ + ಆದಾಯ** | **10622684** |
| | **ಒಟ್ಟು (ಕೋಟಿಗಳಲ್ಲಿ)** | **106226.84** |

## ಓ. 2014–15 ರಿಂದ 2018–19 ರವರೆಗೆ ಸಮಗ್ರ ಮಾದರಿ ಸಮೀಕ್ಷೆಯಲ್ಲಿ ಅಂದಾಜಿಸಿದ ಹಾಲಿನ ಉತ್ಪಾದನೆಯ ವಿವರ.

(ಕೋಟಿ ಕೆ.ಜಿ.ಗಳಲ್ಲಿ)

| ವರ್ಷ | ದನ | ಎಮ್ಮೆ | ಮೇಕೆ | ಒಟ್ಟು | ಶೇಕಡವಾರು ವ್ಯತ್ಯಾಸ (ಕಳೆದ ವರ್ಷಕ್ಕೆ ಹೋಲಿಸಿದಾಗ) |
|---|---|---|---|---|---|
| 2014–2015 | 433 | 173 | 6 | 612 | 2.00 |
| 2015–2016 | 442 | 185 | 8 | 634 | 3.59 |
| 2016–2017 | 456 | 192 | 8 | 656 | 3.47 |
| 2017–2018 | 522 | 180 | 12 | 714 | 8.84 |
| 2018–2019 | 592 | 187 | 11 | 790 | 10.64 |

## ಓ. 2014–15 ರಿಂದ 2018–19 ರವರೆಗೆ ಸಮಗ್ರ ಮಾದರಿ ಸಮೀಕ್ಷೆಯಲ್ಲಿ ಅಂದಾಜಿಸಿದ ಮೊಟ್ಟೆ ಉತ್ಪಾದನೆಯ ವಿವರ.

(ಕೋಟಿ ಸಂಖ್ಯೆಗಳಲ್ಲಿ)

| ವರ್ಷ | ಸ್ಥಳೀಯ | ಸುಧಾರಿತ | ವಾಣಿಜ್ಯ ಕುಕ್ಕುಟಗಳು* | ಒಟ್ಟು | ಶೇಕಡವಾರು ವ್ಯತ್ಯಾಸ (ಕಳೆದ ವರ್ಷಕ್ಕೆ ಹೋಲಿಸಿದಾಗ) |
|---|---|---|---|---|---|
| 2014–2015 | 61 | 378 | – | 439 | 6.30 |
| 2015–2016 | 31 | 14 | 432 | 477 | 8.66 |
| 2016–2017 | 32 | 16 | 459 | 507 | 6.29 |
| 2017–2018 | 59 | 11 | 487 | 557 | 9.86 |
| 2018–2019 | 62 | 12 | 526 | 600 | 7.72 |

ಟಿಪ್ಪಣಿ: * 2015–16ನೇ ಸಾಲಿನಿಂದ ವಾಣಿಜ್ಯ ಕುಕ್ಕುಟಗಳ ಮಾಹಿತಿಯನ್ನು ಪ್ರತ್ಯೇಕವಾಗಿ ಸಮಗ್ರ ಮಾದರಿ ಸಮೀಕ್ಷೆಯಲ್ಲಿ ಸಂಗ್ರಹಿಸಲಾಗುತ್ತಿದೆ.

ಔ. **2014–15** ರಿಂದ **2018–19** ರವರೆಗೆ ಸಮಗ್ರ ಮಾದರಿ ಸಮೀಕ್ಷೆಯಲ್ಲಿ ಅಂದಾಜಿಸಿದ ಉಣ್ಣೆ ಉತ್ಪಾದನೆಯ ವಿವರ.

| ವರ್ಷ | ಪ್ರತಿ ಕುರಿಯ ಉಣ್ಣೆ ಉತ್ಪತ್ತಿ (ಗ್ರಾಂಗಳಲ್ಲಿ) | ಒಟ್ಟು ಉಣ್ಣೆ ಉತ್ಪಾದನೆ (ಲಕ್ಷ ಕೆ.ಜಿ.ಗಳಲ್ಲಿ) |
|---|---|---|
| 2014–2015 | 748 | 88 |
| 2015–2016 | 748 | 82 |
| 2016–2017 | 724 | 66 |
| 2017–2018 | 640 | 43 |
| 2018–2019 | 588 | 31 |

ಅಂ. **2014–15** ರಿಂದ **2018–19** ರವರೆಗೆ ಸಮಗ್ರ ಮಾದರಿ ಸಮೀಕ್ಷೆಯಲ್ಲಿ ಅಂದಾಜಿಸಿದ ಮಾಂಸ ಉತ್ಪಾದನೆಯ ವಿವರ.

| ವರ್ಷ | ಒಟ್ಟು ಮಾಂಸದ ಉತ್ಪಾದನೆ (ಕೋಟಿ ಕೆ.ಜಿ.ಗಳಲ್ಲಿ) | ಶೇಕಡವಾರು ವ್ಯತ್ಯಾಸ (ಕಳೆದ ವರ್ಷಕ್ಕೆ ಹೋಲಿಸಿದಾಗ) |
|---|---|---|
| 2014–2015 | 18 | 5.88 |
| 2015–2016 | 20 | 11.11 |
| 2016–2017 | 21 | 5.00 |
| 2017–2018 | 23 | 9.52 |
| 2018–2019 | 25 | 8.70 |

**ಕ. ತಲಾವಾರು (per capita) ಹಾಲು, ಮೊಟ್ಟೆ ಹಾಗೂ ಮಾಂಸದ ಶಿಫಾರಸ್ಸು, ಲಭ್ಯತೆ ಮತ್ತು ವ್ಯತ್ಯಾಸಗಳ ವಿವರ.**

| ವರ್ಷ | ಶಿಫಾರಸ್ಸು | ಲಭ್ಯತೆ | ವ್ಯತ್ಯಾಸ |
|---|---|---|---|
| ಹಾಲು (ಗ್ರಾಂಗಳಲ್ಲಿ) (ಒಂದು ದಿನಕ್ಕೆ) | 300 | 354* | +54 |
| ಮೊಟ್ಟೆ (ಸಂಖ್ಯೆಗಳಲ್ಲಿ) (ಒಂದು ವರ್ಷಕ್ಕೆ) | 180 | 98 | –82 |
| ಮಾಂಸ (ಕಿಲೋ ಗ್ರಾಂಗಳಲ್ಲಿ) (ಒಂದು ವರ್ಷಕ್ಕೆ) | 11 | 4.15 | –6.85 |

**ಮೂಲ : Indian Council of Medical Research (ICMR)**

**(2011 ನೇ ಜನಗಣತಿಯ ವರದಿಯನ್ವಯ)**

***ಹಸು, ಎಮ್ಮೆ ಹಾಗೂ ಮೇಕೆ ಹಾಲು ಮಾತ್ರ ಒಳಗೊಂಡಿದೆ**

## ಖ. ಇಲಾಖೆಯ ಅಭಿವೃದ್ಧಿ ಕಾರ್ಯ ಚಟುವಟಿಕೆಗಳು

### 1. ಜಾನುವಾರು ಆರೋಗ್ಯ ಮತ್ತು ಪಶುವೈದ್ಯಕೀಯ ಸೇವೆಗಳು :

2012ರ 19ನೇ ಜಾನುವಾರು ಗಣತಿಯ ವರದಿಯ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು 2.90 ಕೋಟಿ ಜಾನುವಾರು ಮತ್ತು 5.34 ಕೋಟಿ ಕುಕ್ಕುಟ ಸಂಪತ್ತು ಇರುತ್ತದೆ. ಇವುಗಳ ಆರೋಗ್ಯ ರಕ್ಷಣೆಗಾಗಿ ಪಶುವೈದ್ಯಕೀಯ ಸೇವೆಯನ್ನು ರಾಜ್ಯದಾದ್ಯಂತ ವಿವಿಧ ದರ್ಜೆಯ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಇಲಾಖೆಯು ನೀಡುತ್ತಿರುತ್ತದೆ. ಜಾನುವಾರು ರೋಗಗಳನ್ನು ಕ್ರಮಬದ್ಧವಾಗಿ ನಿಯಂತ್ರಿಸಲು ಜಾನುವಾರು ರೋಗಗಳ ಕಣ್ಗಾವಲು ಯೋಜನೆ, ರಾಷ್ಟ್ರೀಯ ಪ್ರಾಧಾನ್ಯ ಜಾನುವಾರು ರೋಗಗಳ ಕ್ರಮಬದ್ಧ ನಿಯಂತ್ರಣ ಯೋಜನೆ ಎಂಬ ಎರಡು ಯೋಜನೆಗಳನ್ನು ಅಳವಡಿಸಿಕೊಂಡಿರುತ್ತದೆ. ಅಲ್ಲದೇ ಜಾನುವಾರುಗಳಲ್ಲಿ ಕಂಡು ಬರುವ ಭೀಕರ ಖಾಯಿಲೆಯಿಂದ ದೊಡ್ಡರೋಗವನ್ನು ನಿಯಂತ್ರಿಸಲು ರಾಷ್ಟ್ರೀಯ ದೊಡ್ಡರೋಗ ನಿವಾರಣಾ ಕಾರ್ಯಕ್ರಮವನ್ನು ಇಲಾಖೆಯು ಅನುಷ್ಠಾನಗೊಳಿಸಿರುತ್ತದೆ. ಜಾನುವಾರುಗಳಲ್ಲಿ ಹಾಗೂ ಕುಕ್ಕುಟಗಳಲ್ಲಿ ಕಂಡು ಬರುವ ಸಾಂಕ್ರಾಮಿಕ ಮತ್ತು ಸೋಂಕು ರೋಗಗಳಾದ ದೊಡ್ಡರೋಗ, ನರಡಿ ರೋಗ, ನೀಲಿನಾಲಿಗೆ ರೋಗ, ಕುರಿಗಳ ಕರುಳು ಬೇನೆ, ಕೋಳಿ ಸಿಡುಬು, ಪಿ.ಪಿ.ಆರ್, ರಾಣಿಕೇಟ್, ರೇಬೀಸ್, ಕಾಲುಬಾಯಿ ಜ್ವರ, ಗಳಲೆರೋಗ, ಚಪ್ಪೆರೋಗ, ಗಂಟಲು ಬೇನೆ, ಕುರಿ

ಸಿಡುಬು ಮುಂತಾದ ರೋಗಗಳ ವಿರುದ್ಧ ಕ್ರಮಬದ್ಧವಾಗಿ ಲಸಿಕೆಗಳನ್ನು ನೀಡುವುದರ ಮೂಲಕ ನಿಯಂತ್ರಣ ಗೊಳಿಸಲಾಗುತ್ತದೆ. ರೋಗಗಳ ತಡೆ ಮತ್ತು ನಿಯಂತ್ರಣಕ್ಕೆ ಬೇಕಾದ ಚುಚ್ಚುಮದ್ದುಗಳನ್ನು ಹೆಬ್ಬಾಳದಲ್ಲಿರುವ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಸರಬರಾಜಾಗುತ್ತಿದೆ.

**2. ಜಾನುವಾರು ಅಭಿವೃದ್ಧಿ :**

ಇಲಾಖೆಯು ಬಹುಮುಖ್ಯ ಕಾರ್ಯವಾದ ಜಾನುವಾರು ಅಭಿವೃದ್ಧಿಯನ್ನು ಕೃತಕ ಗರ್ಭಧಾರಣಾ ತಾಂತ್ರಿಕತೆಯ ಮೂಲಕ ಸಾಧಿಸಲಾಗುತ್ತಿದೆ. ಜನಕ ಮೌಲ್ಯ ನಿರ್ಣಯ ಕೋಶದ ಮೂಲಕ ಉತ್ತಮ ಗುಣಮಟ್ಟದ ವೀರ್ಯನಳಿಕೆಗಳನ್ನು ವೈಜ್ಞಾನಿಕ ರೀತಿಯಲ್ಲಿ ರಾಜ್ಯದ ವಿವಿಧೆಡೆ ಸರಬರಾಜು ಮಾಡಲಾಗುತ್ತಿದೆ. ಇಲಾಖೆಯ ಅಧೀನದಲ್ಲಿ ಒಟ್ಟು ಮೂರು ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿವೆ. ಇವುಗಳು ಯಾವುವೆಂದರೆ, ರಾಜ್ಯ ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ರಾಜ್ಯ ವೀರ್ಯ ಸಂಕಲನಾ ಕೇಂದ್ರ, ಹೆಸರಘಟ್ಟ ಮತ್ತು ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಧಾರವಾಡ, ರಾಜ್ಯದಲ್ಲಿ ಒಟ್ಟು 11 ಜಾನುವಾರು ಕ್ಷೇತ್ರಗಳಿದ್ದು, ಇವು ಬೀಜದ ಹೋರಿಗಳನ್ನು ಹಾಗೂ ಉತ್ತಮ ಕಡಸುಗಳನ್ನು ಉತ್ಪಾದಿಸುತ್ತಿರುವುದು ಮಾತ್ರವಲ್ಲದೆ ಮೇವಿನ ಬೀಜಗಳನ್ನು

ಉತ್ಪಾದಿಸುವುದು ಮತ್ತು ಆಧುನಿಕ ಪಶುಸಂಗೋಪನಾ ವಿಧಾನಗಳ ಬಗ್ಗೆ ರೈತರಿಗೆ ತರಬೇತಿ ನೀಡುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

**3. ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ :**

**1. ರಾಷ್ಟ್ರೀಯ ಗೋಕುಲ ಮಿಷನ್**

**ಅ. ರಾಷ್ಟ್ರೀಯ ದನ ಮತ್ತು ಎಮ್ಮೆ ತಳಿ ಅಭಿವೃದ್ಧಿ ಕಾರ್ಯಕ್ರಮ :**

ರಾಷ್ಟ್ರೀಯ ಗೋಕುಲ ಮಿಷನ್ ಯೋಜನೆಯಡಿ, ರಾಷ್ಟ್ರೀಯ ದನ ಮತ್ತು ಎಮ್ಮೆ ತಳಿ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಬಿ.) 2015–16ನೇ ಸಾಲಿನಿಂದ ಅನುಷ್ಠಾನ ಗೊಳಿಸಲಾಗುತ್ತಿದ್ದು, 2018–19ನೇ ಸಾಲಿನಲ್ಲಿಯೂ ಮುಂದುವರೆದಿದೆ. ಎನ್.ಪಿ.ಬಿ.ಬಿ. ಯೋಜನೆಯಡಿ ಮೈತ್ರಿ ಕಾರ್ಯಕರ್ತರನ್ನು (Multipurpose AI Technicians of Rural India) ಇಲಾಖೆ ಹಾಗೂ ಕೆ.ಎಂ.ಎಫ್. ವತಿಯಿಂದ ಕೃತಕ ಗರ್ಭಧಾರಣೆ ಹಾಗೂ ಇತರೆ ಪಶುವೈದ್ಯಕೀಯ ಸೇವೆ ದೊರಕದ ಸ್ಥಳಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇಲ್ಲಿಯುವರೆಗೂ 16 ಜಿಲ್ಲೆಗಳಲ್ಲಿ 872 ಮೈತ್ರಿ ಕಾರ್ಯಕರ್ತರನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗಿದೆ. ರಾಜ್ಯದ ಆಯ್ದ 12 ಸ್ಥಳಗಳಲ್ಲಿ ಲಿಕ್ವಿಡ್ ನೈಟ್ರೋಜನ್ ಸೈಲೋಸ್‌ಗಳನ್ನು (silos) ಸ್ಥಾಪಿಸಿ ಕಾರ್ಯಾರಂಭ ಗೊಳಿಸಲಾಗಿದೆ.

**ಆ. ರಾಷ್ಟ್ರೀಯ ಗೋಕುಲ ಗ್ರಾಮ ಸ್ಥಾಪನೆ :**

ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಗೋಕುಲ್ ಗ್ರಾಮ ಕಾರ್ಯಕ್ರಮದಡಿ ಅಮೃತ್‌ಮಹಲ್ ಸ್ಥಳೀಯ ತಳಿಯ ಸಂರಕ್ಷಣೆ ಮತ್ತು ಸಾಕಾಣಿಕೆಗಾಗಿ ಲಿಂಗದಹಳ್ಳಿ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೋಕುಲ ಗ್ರಾಮ ಸ್ಥಾಪನೆಗೆ ಅಗತ್ಯ ಕ್ರಮವಹಿಸಲಾಗುತ್ತಿದೆ. ಈಗಾಗಲೇ ಅಮೃತ್‌ಮಹಲ್ ತಳಿಯ ಗೋಕುಲ ಗ್ರಾಮ ಸ್ಥಾಪನೆ ಸಂಬಂಧ ಸದರಿ ತಳಿಗಳ ಕ್ಷೇತ್ರ ಸಾಮರ್ಥ್ಯ ದಾಖಲಾತಿಯನ್ನು ಪಶುವೈದ್ಯಕೀಯ ವಿಶ್ವವಿದ್ಯಾಲಯದಿಂದ ನಡೆಸಲಾಗಿದ್ದು, ಒಟ್ಟು ರೂ. 310.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದ್ದು, ರಾಸುಗಳ ಆಯ್ಕೆಗಾಗಿ ಸೂಕ್ತ ಕ್ರಮ ವಹಿಸಲಾಗಿದೆ.

**ಇ. ರಾಷ್ಟ್ರೀಯ ಜಾನುವಾರು ಉತ್ಪಾದಕತಾ ಅಭಿಯಾನ (ಎನ್‌ಎಂಬಿಪಿ)**

ಜಾನುವಾರುಗಳ ಗುರುತಿಸುವಿಕೆ/ಪತ್ತೆ ಹಚ್ಚುವಿಕೆ ಹಾಗೂ ಜಾಡೀಕರಣ ಉದ್ದೇಶಕ್ಕಾಗಿ ಮತ್ತು ಹೈನು ರಾಸುಗಳ ಉತ್ಪಾದಕತೆಯನ್ನು ಸುಧಾರಿಸಿ, ಹಾಲು ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಗೋಕುಲ ಮಿಷನ್ ಯೋಜನೆಯಡಿ, ದನ ಮತ್ತು ಎಮ್ಮೆ ತಳಿ ಉತ್ಪಾದಕತೆಯು ರಾಷ್ಟ್ರೀಯು ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ

ಯೋಜನೆಯ ಪಶು ಸಂಜೀವಿನಿ ಕಾರ್ಯಕ್ರಮದಡಿ ರಾಸುಗಳಿಗೆ 'ಸ್ವಾಸ್ಥ್ಯ' ಪತ್ರವನ್ನು ವಿತರಿಸಲಾಗುತ್ತಿದೆ. ವಿಶೇಷ ಗುರುತಿನ ಸಂಖ್ಯೆಯ ಕಿವಿಯೋಲೆಗಳನ್ನು ರಾಸುಗಳಿಗೆ ಅಳವಡಿಸಿ, ಅವುಗಳ ಸಂವರ್ಧನೆ, ಆರೋಗ್ಯ, ಪೌಷ್ಟಿಕತೆ ಹಾಗೂ ಉತ್ಪಾದಕತೆ ಸಂಬಂಧಿಸಿದ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಲಾಗುತ್ತಿದೆ. ಕಿವಿ ಓಲೆಗಳಿಗೆ ವಿಶೇಷ ಸಂಖ್ಯೆಯನ್ನು ಎನ್‌ಡಿಡಿಬಿ ಸಂಸ್ಥೆಯು ಒದಗಿಸುತ್ತದೆ.

ಪಶು ಸಂಜೀವಿನಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು ಸೇರಿ ಒಟ್ಟು ರೂ 791.86 ಲಕ್ಷ ಬಿಡುಗಡೆಯಾಗಿದ್ದು, ಇದು ಶೇಕಡ 60:40 ರ (ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು) ಅನುಪಾತದಲ್ಲಿದೆ. ಸದರಿ ಅನುದಾನದಲ್ಲಿ ಒಟ್ಟು 46.10 ಲಕ್ಷ ಹಿಂಡುವ ದನ ಮತ್ತು ಎಮ್ಮೆಗಳಿಗೆ ವಿಶೇಷ ಗುರುತಿನ ಸಂಖ್ಯೆಯುಳ್ಳ ಕಿವಿಯೋಲೆ ಅಳವಡಿಸಿ, ಸದರಿ ಜಾನುವಾರುಗಳ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ಅಳವಡಿಸುವ ಗುರಿ ಹೊಂದಲಾಗಿದ್ದು, ಈವರೆಗೆ 25.00 ಲಕ್ಷ ಜಾನುವಾರುಗಳ ಮಾಹಿತಿಯನ್ನು ದಾಖಲಿಸಲಾಗಿದೆ. ಮಾಹಿತಿ ದಾಖಲಾತಿ ಕಾರ್ಯಕ್ಕಾಗಿ 'ಟ್ಯಾಬ್'ಗಳನ್ನು ಖರೀದಿಸಿ ವಿತರಿಸಲಾಗಿದೆ. ಹಾಗೂ 10.00 ಲಕ್ಷ ಜಾನುವಾರು 'ಸ್ವಾಸ್ಥ್ಯ' ಪತ್ರಗಳನ್ನು ಸಹ ವಿತರಿಸಲಾಗಿದೆ.

## 2. ರಾಷ್ಟ್ರೀಯ ಜಾನುವಾರು ಮಿಷನ್

### ಅ. ಜಾನುವಾರು ವಿಮಾ ಯೋಜನೆ

ರೈತರು ತಮ್ಮ ಹಾಲು ಹಿಂಡುವ ರಾಸುಗಳನ್ನು ಆಕಸ್ಮಿಕ ಮರಣ ಇಲ್ಲವೆ ಇತರೆ ಕಾರಣಗಳಿಂದ ಕಳೆದು ಕೊಂಡಲ್ಲಿ, ಆರ್ಥಿಕ ನಷ್ಟ ಭರಿಸುವ ಉದ್ದೇಶದಿಂದ ಜಾನುವಾರುಗಳಿಗೆ 'ಜಾನುವಾರು ವಿಮಾ ಯೋಜನೆ'ಯಡಿ ವಿಮೆಗೆ ಒಳಪಡಿಸಲಾಗುತ್ತಿದೆ. 2017–18 ನೇ ಸಾಲಿನಲ್ಲಿ ಒಟ್ಟು 1,40,000 ರಾಸುಗಳನ್ನು ವಿಮೆಗೆ ಒಳಪಡಿಸಲಾಗಿದ್ದು, ರೂ. 744.00 ಲಕ್ಷಗಳು ವೆಚ್ಚವಾಗಿರುತ್ತದೆ. 2018–19ನೇ ಸಾಲಿನಲ್ಲಿ 'ಜಾನುವಾರು ವಿಮಾ ಯೋಜನೆ'ಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ.

### ಆ. ಮೇವಿನ ಬೀಜದ ಕಿರುಪೊಟ್ಟಣಗಳ ಖರೀದಿ ಮತ್ತು ವಿತರಣೆ:

ರೈತರಲ್ಲಿ ಮೇವಿನ ಬೆಳೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಮೇವಿನ ಬೀಜದ ಕಿರುಪೊಟ್ಟಣಗಳ ಖರೀದಿ ಮತ್ತು ವಿತರಣೆಯ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ ರೂ. 166.67 ಲಕ್ಷಗಳ ವೆಚ್ಚದೊಂದಿಗೆ ಕಾರ್ಯಕ್ರಮದಲ್ಲಿ ಆಫ್ರಿಕನ್ ಟಾಲ್ ಮುಸುಕಿನ ಜೋಳ ಮತ್ತು ಸೋರ್ಗಮ್ ತಳಿಯ ಮೇವಿನ ಬೀಜಗಳ 65,787 ಕಿರುಪೊಟ್ಟಣಗಳನ್ನು ವಿತರಿಸಲಾಗುತ್ತಿದೆ.

**ಇ. ವಿಮೆ ರಹಿತ ಅಪಘಾತಕ್ಕೆ ಒಳಗಾದ ರಾಸುಗಳಿಗೆ ಪರಿಹಾರ (Exgratia) :**

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 81 ಪಪಾಯೋ 2017 ಬೆಂಗಳೂರು, ದಿನಾಂಕ: 05.08.2017 ರಂತೆ, ವಿಮೆಗೆ ಒಳಪಡದ ಎಮ್ಮೆ ಮತ್ತು ಹಸುಗಳು ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಠ ರೂ. 10,000/– ಮಿತಿಯೊಳಗೆ ಪರಿಹಾರಧನವನ್ನು ನೀಡಲು ಆದೇಶಿಸಲಾಗಿದ್ದ, ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಪಸಂಮೀ 81 ಪಪಾಯೋ 2017 ಬೆಂಗಳೂರು, ದಿನಾಂಕ: 28–10–2017 ರಂತೆ, ವಿಮೆಗೆ ಒಳಪಡದ ಎತ್ತು/ ಹಸು/ ಹೋರಿ/ ಕೋಣ/ ಎಮ್ಮೆ/ ಕಡಸು/ ಮಣಕಗಳು (ಆರು ತಿಂಗಳು ಮೇಲ್ಪಟ್ಟು), ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಸಹ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಠ ರೂ.10,000/– ಮಿತಿಯೊಳಗೆ ಪರಿಹಾರಧನವನ್ನು ನೀಡುವ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ. 2017–18ನೇ ಸಾಲಿನಲ್ಲಿ 2659 ಜಾನುವಾರುಗಳ ಮರಣ ಪರಿಹಾರಕ್ಕಾಗಿ ರೂ. 265.68 ಲಕ್ಷಗಳನ್ನು ಸಂತ್ರಸ್ತರಿಗೆ ವಿತರಿಸಲಾಗಿದ್ದು, ಈ ಪೈಕಿ ರೂ.98.68 ಲಕ್ಷಗಳ ಪರಿಹಾರಧನವನ್ನು ಪ.ಜಾ. ಮತ್ತು ಪ.ಪಂ.ದ ಜಾನುವಾರು ಮಾಲೀಕರಿಗೆ ನೀಡಲಾಗಿರುತ್ತದೆ. 2018–19ನೇ ಸಾಲಿನಲ್ಲಿ ರೂ. 1017.59 ಲಕ್ಷಗಳ ಪರಿಹಾರಧನವನ್ನು 10,194 ಸಂತ್ರಸ್ತರಿಗೆ ವಿತರಿಸಲಾಗಿರುತ್ತದೆ.

**3. ಹವಾಮಾನ ವೈಪರೀತ್ಯ ಸಂಬಂಧ ದೇಶಿ ತಳಿ ರಾಸುಗಳು/ ಕುರಿ/ಮೇಕೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕಾರ್ಯಕ್ರಮ (NAFCC):**

ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ ರಾಜ್ಯದ ದೇಶಿ ಜಾನುವಾರುಗಳು/ ಕುರಿ/ಮೇಕೆಗಳ (ಮಲೆನಾಡು ಗಿಡ್ಡ/ದೇವಣಿ/ಹಳ್ಳಿಕಾರ್ ತಳಿಯ ಹಸುಗಳು ಹಾಗೂ ಬನ್ನೂರು/ಡೆಕ್ಕನಿ/ಬಳ್ಳಾರಿ ತಳಿಯ ಕುರಿಗಳು) ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ಕೇಂದ್ರ ಸರ್ಕಾರದ ವತಿಯಿಂದ ರೂ. 24.21 ಕೋಟಿ ಅನುದಾನ ಮಂಜೂರಾಗಿದ್ದು, ಅದರ ಪೈಕಿ ಮೊದಲನೆಯ ಕಂತಾಗಿ ರೂ. 4.44 ಕೋಟಿ ಬಿಡುಗಡೆಗೊಳಿಸಲಾಗಿದೆ. ಯೋಜನಾ ಅನುಷ್ಠಾನ ಸಂಸ್ಥೆ ಗಳಾದ ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ, ಪಶುವೈದ್ಯಕೀಯ ವಿಶ್ವವಿದ್ಯಾಲಯ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಹಾಗೂ ರಾಷ್ಟ್ರೀಯ ಹೈನುಗಾರಿಕೆ ಸಂಶೋಧನೆ ಸಂಸ್ಥೆಗಳಿಗೆ ಕಾರ್ಯಕ್ರಮ ಅನುಷ್ಠಾನ ಸಂಬಂಧ ಅನುದಾನ ಬಿಡುಗಡೆಗೊಳಿಸಲಾಗಿದ್ದು, ಮಲೆನಾಡು ಗಿಡ್ಡ/ ದೇವಣಿ/ಹಳ್ಳಿಕಾರ್ ತಳಿಯ ಹಸುಗಳ ಮೂಲನೆಲೆಯ ಸಮೀಕ್ಷೆ ನಡೆಸಲಾಗಿದ್ದು, ರಾಸುಗಳ ಕ್ಷೇತ್ರ ಸಾಮರ್ಥ್ಯ ದಾಖಲಿಸಲಾಗಿದೆ. ಮಲೆನಾಡು ಗಿಡ್ಡ ತಳಿಯ ಗೋಕುಲ ಗ್ರಾಮವನ್ನು ಕೊಯ್ಲಾ ಕ್ಷೇತ್ರ ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೇವಣಿ ತಳಿಯ ಗೋಕುಲ ಗ್ರಾಮವನ್ನು ಹಳ್ಳಿಖೇಡ, ಬೀದರ್

ಜಿಲ್ಲೆಯಲ್ಲಿ ಹಾಗೂ ಹಳ್ಳಿಕಾರ್ ರಾಸುಗಳ ಗೋಕುಲ ಗ್ರಾಮವನ್ನು ಕುಣಿಕೇನಹಳ್ಳಿ ಕ್ಷೇತ್ರ, ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲು ಕ್ರಮವಹಿಸಲಾಗಿದೆ. ದೇಶಿ ತಳಿ ಕುರಿಗಳ ಸಂರಕ್ಷಣೆ ಮತ್ತು ಸಾಕಾಣಿಕೆಗಾಗಿ ಸಹ ಕ್ರಮವಹಿಸಲಾಗಿದೆ. ಮೇವಿನ ಸಮರ್ಪಕ ಬಳಕೆಯನ್ನು ಪ್ರೋತ್ಸಾಹಿಸಲು 2080 'ಮೇವು ಕಟಾಯಿಸುವ' ಯಂತ್ರಗಳನ್ನು ರಾಜ್ಯದ 17 ಜಿಲ್ಲೆಯಲ್ಲಿನ ರೈತರಿಗೆ ವಿತರಿಸಲಾಗುತ್ತಿದೆ.

## 4. ಕುಕ್ಕುಟ ಅಭಿವೃದ್ಧಿ

**ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ಉದ್ದೇಶ :**

- ❖ ಕೋಳಿ ಉದ್ಯಮದಲ್ಲಿ ತೊಡಗಿರುವ ರೈತರನ್ನು ಸಂಘಟಿಸಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು, ಕೋಳಿ ಮತ್ತು ಮೊಟ್ಟೆ ಮಾರಾಟ ಹಾಗೂ ಸ್ವಚ್ಛ ಕೋಳಿ ಮಾಂಸ ಮಾರಾಟ ಉತ್ತೇಜಿಸುವುದು.

- ❖ ಗ್ರಾಮೀಣ ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ಪ್ರಾಥಮಿಕ ಕುಕ್ಕುಟ ಸಹಕಾರ ಸಂಘಗಳ ಸ್ಥಾಪನೆ ಹಾಗೂ ಅವುಗಳ ಬಲವರ್ಧನೆ.

- ❖ ವಿಸ್ತರಣಾ ಕಾರ್ಯಕ್ರಮದಡಿ ಆಧುನಿಕ ತಂತ್ರಜ್ಞಾನದನ್ವಯ ಕೋಳಿ ಸಾಕಾಣಿಕೆ ಕುರಿತು ರೈತರಿಗೆ ತರಬೇತಿ ನೀಡುವುದು ಹಾಗೂ ಕೋಳಿ ಉತ್ಪನ್ನಗಳಾದ ತತ್ತಿ ಮತ್ತು

ಮಾಂಸವನ್ನು ಆಹಾರವಾಗಿ ಸೇವಿಸುವಲ್ಲಿ ಪ್ರೋತ್ಸಾಹಿಸುವುದು.

- ❖ ಕೋಳಿ ರೋಗಗಳ ಪರಿವೀಕ್ಷಣೆ ಹಾಗೂ ನಿಯಂತ್ರಣ ಇಲಾಖೆ ಅಧಿಕಾರಿಗಳೊಂದಿಗೆ ಕೈಗೊಳ್ಳುವುದು.
- ❖ ವಿವಿಧ ಇಲಾಖಾ ಹಾಗೂ ಸರ್ಕಾರದ ಯೋಜನೆಗಳಿಗೆ ಗಿರಿರಾಜ ಕೋಳಿ ಮರಿಗಳ ಸಾಕಾಣಿಕೆ ಹಾಗೂ ಮಾರಾಟ.
- ❖ ಕರ್ನಾಟಕ ಸರ್ಕಾರವು ಕೋಳಿ ಶೀತ ಜ್ವರ ಕಣ್ಗಾವಲಿಗಾಗಿ ಪ್ರಾಣಿಜನ್ಯ ರೋಗಗಳ ತುರ್ತು ನಿರ್ವಹಣಾ ಸಮಿತಿಯನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ರಚಿಸಿದ್ದು, ಸಭೆ ಜರುಗಿಸುವುದರೊಂದಿಗೆ ಸಾರ್ವಜನಿಕರಿಗೆ ಅರಿವು ಹಾಗೂ ಮಾಹಿತಿ ನೀಡುವುದು ಹಾಗೂ ಇಲಾಖೆ ಅಧಿಕಾರಿಗಳಿಗೆ ಸದರಿ ವಿಷಯದಲ್ಲಿ ಸಹಕಾರವನ್ನು ನೀಡುವುದು.
- ❖ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದು,

**ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಅನುಷ್ಠಾನ ಗೊಳಿಸುತ್ತಿರುವ ಕಾರ್ಯಕ್ರಮಗಳು.**

- ❖ ನಿರುದ್ಯೋಗಿ ಯುವಕ/ಯುವತಿಯರಿಗೆ ಕೋಳಿ ಸಾಕಾಣಿಕೆಯಲ್ಲಿ ಅಲ್ಪಾವಧಿ ತರಬೇತಿ ಕಾರ್ಯಕ್ರಮ.

- ❖ ಗಿರಿರಾಜ ಕೋಳಿಮರಿಗಳ ಉತ್ಪಾದನೆ ಮತ್ತು ವಿತರಣೆ.
- ❖ ನಿರುದ್ಯೋಗಿ ಯುವಕ/ಯುವತಿಯರಿಗೆ 500 ಮಾಂಸದ ಕೋಳಿ ಘಟಕ ಸ್ಥಾಪನೆಗಾಗಿ ಸಹಾಯಧನದ ಯೋಜನೆ.
- ❖ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ 500 ಸಂಖ್ಯೆಯ ಮೊಟ್ಟೆ–ಮಾಂಸದ ಕೋಳಿಗಳ ಘಟಕ ಸ್ಥಾಪನೆಗೆ ನಿರುದ್ಯೋಗಿ ಯುವಕ/ಯುವತಿಯರಿಗೆ ಸಹಾಯಧನವನ್ನು ನೀಡುವುದು.
- ❖ ರೈತರಿಗೆ ಅಧ್ಯಯನ ಪ್ರವಾಸದ ಆಯೋಜನೆ.
- ❖ ಕೋಳಿ ಸಾಕಾಣಿಕೆಗೆ ಸಂಬಂಧಿಸಿದಂತೆ ವಿಚಾರ ಸಂಕಿರಣ ಆಯೋಜನೆ.
- ❖ ಇಲಾಖೆಯ ಪಶುವೈದ್ಯರಿಗೆ ಆಧುನಿಕ ಕೋಳಿ ಸಾಕಾಣಿಕೆ ಬಗ್ಗೆ ಪುನಶ್ಚೇತನ ತರಬೇತಿ ನೀಡಲಾಗುವುದು.

**5. ಕುರಿ ಮತ್ತು ಉಣ್ಣೆ ಅಭಿವೃದ್ಧಿ :**

ರಾಜ್ಯದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿಗಾಗಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತವನ್ನು ರಚಿಸಲಾಗಿದೆ. ನಿಗಮದ ಅಧೀನದಲ್ಲಿ 5 ಕುರಿ ಸಂವರ್ಧನಾ ಕೇಂದ್ರಗಳಿದ್ದು (ಧನಗೂರು, ಕುಧಾಪುರ, ಗುತ್ತಲ, ಸುತ್ತಟ್ಟಿ ಮತ್ತು ಅನಗವಾಡಿ) ಇವುಗಳಲ್ಲಿ ಕುರಿ ಮತ್ತು ಮೇಕೆಗಳ ತಳಿ ಸಂವರ್ಧನೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಧನಗೂರು ಕೇಂದ್ರದಲ್ಲಿ ಬಂಡೂರು ತಳಿಯ ಕುರಿಗಳನ್ನು, ಗುತ್ತಲ ಕೇಂದ್ರದಲ್ಲಿ ಕೆಂಗುರಿ ತಳಿ ಮತ್ತು ಕುಧಾಪುರ ಕೇಂದ್ರಗಳಲ್ಲಿ ಡೆಕ್ಕನಿ ತಳಿ ಕುರಿಗಳನ್ನು, ಅನಗವಾಡಿ ಕೇಂದ್ರದಲ್ಲಿ ಓಸ್ಮಾನಾಬಾದಿ ತಳಿಯ ಮೇಕೆಗಳನ್ನು, ಸುತ್ತಟ್ಟಿಯಲ್ಲಿ ಡೆಕ್ಕನಿ (ಯಳಗ) ತಳಿ ಕುರಿಗಳನ್ನು ಸಂವರ್ಧನೆಗಾಗಿ ನಿರ್ವಹಿಸಲಾಗುತ್ತಿದೆ. ಸದರಿ ಕೇಂದ್ರಗಳಲ್ಲಿ ಉತ್ಪತ್ತಿಯಾಗುವ ಉತ್ತಮ ಗುಣಮಟ್ಟದ ಟಗರು ಮತ್ತು ಹೋತಗಳನ್ನು ರಾಜ್ಯದ ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೆ ತಮ್ಮಲ್ಲಿರುವ ಸ್ಥಳೀಯ ಕುರಿ ಮತ್ತು ಮೇಕೆಗಳನ್ನು ಉನ್ನತೀಕರಿಸುವ ಸಲುವಾಗಿ ವಿತರಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ 271 ಟಗರು ಮರಿಗಳನ್ನು ಮತ್ತು 83 ಹೋತದ ಮರಿಗಳನ್ನು ಆಸಕ್ತ ಕುರಿ:ಮೇಕೆ ಸಾಕಾಣಿಕೆದಾರರಿಗೆ ಸರ್ಕಾರ ನಿಗದಿಪಡಿಸಿದ ದರದಲ್ಲಿ ಸರಬರಾಜು ಮಾಡಲಾಗಿದೆ. ರಾಜ್ಯದ ಕುರಿ ಮೇಕೆಗಳ ತಳಿ ಅಭಿವೃದ್ಧಿ ಸಂಬಂಧ ಕುರಿ ಮೇಕೆಗಳ ತಳಿ ನೀತಿಯನ್ನು ರಾಜ್ಯ ಸರ್ಕಾರದ ವತಿಯಿಂದ ಜಾರಿಗೊಳಿಸಲಾಗಿದೆ.

ನಿಗಮದ ವತಿಯಿಂದ ಕುರಿಗಳ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಕುರಿ ಮೇಕೆಗಳಿಗೆ ಪ್ರಸ್ತುತ ವರ್ಷದಲ್ಲಿ ರೂ. 500.00 ಲಕ್ಷಗಳ ವೆಚ್ಚದಲ್ಲಿ ಜಂತುನಾಶಕ ಔಷಧಿಯನ್ನು ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಮತ್ತು ಇಲಾಖೆಯ ಪಶುವೈದ್ಯಕೀಯ

ಸಂಸ್ಥೆಗಳ ಸಹಯೋಗದೊಂದಿಗೆ ಒದಗಿಸಲಾಗಿದೆ. ವರ್ಗೀಕರಿಸಲಾಗದ ಕುರಿ ತಳಿಗಳ ಉನ್ನತೀಕರಿಸುವ ಸಲುವಾಗಿ ತಳಿ ನೀತಿ ಅನುಸಾರ ನಾರಿ ಸುವರ್ಣ ಟಗರುಗಳನ್ನು ಕುರಿಗಾರರಿಗೆ ಒದಗಿಸಲಾಗುತ್ತಿದೆ. ಕುರಿ/ ಮೇಕೆಗಳ ತುರ್ತು ಚಿಕಿತ್ಸೆ ಸಲುವಾಗಿ 26 ಬಹುಪಯೋಗಿ ಆಂಬುಲೇಟರಿ ಕ್ಲಿನಿಕ್‌ಗಳನ್ನು ರಾಜ್ಯದ ಕಲಬುರಗಿ, ಬೆಳಗಾವಿ, ವಿಜಯಪುರ, ಮೈಸೂರು, ಬೀದರ್, ತುಮಕೂರು, ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ, ಬಾಗಲಕೋಟೆ, ರಾಯಚೂರು, ಮಂಡ್ಯ, ಹಾವೇರಿ, ಹಾಸನ, ಯಾದಗಿರಿ, ಗದಗ, ಚಿತ್ರದುರ್ಗ, ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೊಪ್ಪಳ, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ, ರಾಮನಗರ ಜಿಲ್ಲೆಗಳಿಗೆ ನೀಡಲಾಗಿದೆ. 230 ವೈಜ್ಞಾನಿಕ ಕುರಿ ಸಾಕಾಣಿಕೆ ಕುರಿತ ಒಂದು ದಿನದ ತರಬೇತಿ ಶಿಬಿರಗಳನ್ನು ಆಯೋಜಿಸುವ ಮೂಲಕ ಕುರಿಗಾರರಿಗೆ ಮಾಹಿತಿಯನ್ನು ಒದಗಿಸಲಾಗಿದೆ. ಕುರಿ ಸಾಕಾಣಿಕೆ ಕುರಿತ ವಸತಿ ಸಹಿತ ತರಬೇತಿಯನ್ನು ಬಂಡೂರು ಕುರಿ ಸಂವರ್ಧನಾ ಕೇಂದ್ರ, ಧನಗೂರು, ಮಂಡ್ಯ ಜಿಲ್ಲೆ ಇಲ್ಲಿ ನಡೆಸಲಾಗುತ್ತಿದೆ.

ಆಕಸ್ಮಿಕವಾಗಿ ಮರಣ ಹೊಂದಿದ ಕುರಿ ಮೇಕೆಗಳಿಗೆ ಸಂಬಂಧಿಸಿದ ಮಾಲೀಕ ಕುರಿಗಾರರುಗಳಿಗೆ ಮರಣ ಹೊಂದಿದ 6 ತಿಂಗಳ ಒಳಗಿನ ಪ್ರತಿ ಕುರಿ/ಮೇಕೆಗಳಿಗೆ ಪ್ರತಿ

ಒಂದಕ್ಕೆ ರೂ.2500/– ಗಳಂತೆ ಮತ್ತು 6 ತಿಂಗಳ ಮೇಲ್ಪಟ್ಟ ಪ್ರತಿ ಕುರಿ/ಮೇಕೆಗಳಿಗೆ ಪ್ರತಿ ಒಂದಕ್ಕೆ ರೂ.5000/– ಗಳಂತೆ ಪರಿಹಾರ ಧನವನ್ನು ಆನ್‌ಲೈನ್ ಮೂಲಕ ನೇರವಾಗಿ ಕುರಿಗಾರರ ಬ್ಯಾಂಕಿನ ಖಾತೆಗಳಿಗೆ ಜಮಾ ಮಾಡಲಾಗುತ್ತಿದೆ. ಈ ಬಾಬ್ತು 2018–19 ನೇ ಸಾಲಿನಲ್ಲಿ ರೂ.2200.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಫಲಾನುಭವಿಗಳ ಖಾತೆಗೆ ಪರಿಹಾರ ಧನವನ್ನು ಜಮಾಮಾಡಲಾಗಿದೆ. ನಿಗಮದಲ್ಲಿ ನೊಂದಾಯಿಸಿಕೊಂಡಿರುವ 250 ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳನ್ನು ಆರ್ಥಿಕವಾಗಿ ಸದೃಡಗೊಳಿಸಲು ಮತ್ತು ಕ್ರಿಯಾಶೀಲವಾಗಿರಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಒಂದಾವರ್ತಿ ಪ್ರೋತ್ಸಾಹ ಧನವಾಗಿ ಪ್ರತಿ ಸಂಘಕ್ಕೆ ರೂ. 5.00 ಲಕ್ಷಗಳನ್ನು ನೀಡಲಾಗಿದೆ ಮತ್ತು ಈ ಯೋಜನೆ ಚಾಲ್ತಿಯಲ್ಲಿದೆ.

ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುರಿಗಾರರು ಕುರಿಸಾಕಾಣಿಕೆಯನ್ನು ಪ್ರಾರಂಭಿಸುವ ಸಲುವಾಗಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 10+1 ಕುರಿ ಮತ್ತು ಮೇಕೆ ಘಟಕಗಳನ್ನು ಶೇ.90 ರ ಸಹಾಯಧನದೊಂದಿಗೆ ಮತ್ತು ಆರ್.ಕೆ.ವಿ.ವೈ ಯೋಜನೆಯಡಿ 10+1 ಕುರಿ ಘಟಕಗಳನ್ನು ಶೇ.90ರ ಸಹಾಯಾನು ದಾನದೊಂದಿಗೆ ಒದಗಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ 356 ಫಲಾನುಭವಿಗಳಿಗೆ

ಮತ್ತು ಗಿರಿಜನ ಉಪಯೋಜನೆಯಡಿ 145 ಫಲಾನುಭವಿಗಳಿಗೆ ಕುರಿ/ಮೇಕೆ ಘಟಕಗಳನ್ನು ಫಲಾನುಭವಿಗಳಿಗೆ ಮತ್ತು ಆರ್‌ಕೆವಿವೈ ಯೋಜನೆಯಡಿ 1000 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ. ನಿಗಮದ ಅಧೀನದಲ್ಲಿರುವ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ, ರಾಣೆಬೆನ್ನೂರು ಹಾವೇರಿ ಜಿಲ್ಲೆ ಇಲ್ಲಿ ಉಣ್ಣೆ ವಸ್ತುಗಳ ತಯಾರಿಕೆ ಮತ್ತು ಕಾರ್ಪೆಟ್ ನೇಯ್ಗೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಬಳ್ಳಾರಿ ಜಿಲ್ಲೆ ಕುರಿಕುಪ್ಪೆ ಗ್ರಾಮದ ಇಲಾಖಾ ಪಶು ಸಂವರ್ಧನಾ ಕೇಂದ್ರದಲ್ಲಿ ರೂ. 110.00 ಲಕ್ಷಗಳ ವೆಚ್ಚದಲ್ಲಿ ಬಳ್ಳಾರಿ ತಳಿ ಕುರಿಗಳನ್ನು ಸಂವರ್ಧನೆ ಮಾಡಿ ಶುದ್ಧ ಬಳ್ಳಾರಿ ತಳಿ ಟಗರುಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಕುರಿಗಾರರಿಗೆ ತರಬೇತಿ ನೀಡಲು ಸುಸಜ್ಜಿತ ತರಬೇತಿ ಕೇಂದ್ರ ನಿರ್ಮಾಣ ಕಾರ್ಯ ಪ್ರಸ್ತುತ ಪ್ರಗತಿಯಲ್ಲಿದೆ. ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿ ರೂ. 489.00 ಲಕ್ಷಗಳ ವೆಚ್ಚದಲ್ಲಿ ಕುರಿ ಉಣ್ಣೆ ಸಂಸ್ಕರಣೆ ಮತ್ತು ಮೌಲ್ಯವರ್ಧನಾ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ನಿವೇಶನ ಹೊಂದಿರುವ 4 ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಉಣ್ಣೆ ಗೋದಾಮು ನಿರ್ಮಾಣ ಮಾಡಲು ರೂ. 50.00 ಲಕ್ಷಗಳ ಅನುದಾನವನ್ನು ಸರ್ಕಾರವು ನಿಗಮಕ್ಕೆ ನೀಡಿದ್ದು ಉಣ್ಣೆ ಗೋದಾಮು ನಿರ್ಮಾಣ ಮಾಡಲು ಕ್ರಮ ವಹಿಸಲಾಗಿದೆ.

**ಹೊಸ ಯೋಜನೆಗಳು :**

1. ವಲಸೆ ಕುರಿಗಾರರಿಗೆ ಪರಿಕರಗಳನ್ನು ಖರೀದಿಸಿ ವಿತರಿಸಲು ರೂ. 400.00 ಲಕ್ಷಗಳ ಅನುದಾನ ಒದಗಿಸಿದ್ದು 2350 ವಲಸೆ ಕುರಿಗಾರರಿಗೆ ಟೆಂಟ್, ಸೋಲಾರ್ ಟಾರ್ಚ್, ರಬ್ಬರ್ ಫ್ಲೋರ್ ಮ್ಯಾಟ್, ರೈನ್ ಕೋಟ್ ಖರೀದಿಸಿ ವಿತರಿಸಲು ಕ್ರಮ ವಹಿಸಲಾಗಿದೆ.

2. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು, ಚೀಲನಹಳ್ಳಿ ಸರ್ವೆ ನಂ. 14 ರಲ್ಲಿ 200.00 ಲಕ್ಷಗಳ ವೆಚ್ಚದಲ್ಲಿ ಕುರಿ ಮೇಕೆಗಳ ಚರ್ಮಸಂಸ್ಕರಣಾ ಘಟಕ ಸ್ಥಾಪಿಸಲು ಕ್ರಮ ವಹಿಸಲಾಗಿದೆ.

3. ಸಂಚಾರಿ ಮಾಂಸ ಮಾರಾಟ ಮಳಿಗೆ ಸ್ಥಾಪನೆ – ರೂ. 1493.25 ಲಕ್ಷಗಳ ಅನುದಾನದಲ್ಲಿ ಆಸಕ್ತ 181 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಾಂಸ ಖಾದ್ಯ ವಸ್ತುಗಳ ತಯಾರಿಕೆಯಲ್ಲಿ ಅನುಭವ ಹೊಂದಿರುವ ನಿರುದ್ಯೋಗಿ ಯುವಕರಿಗೆ ಮಾಂಸ ಮಾರಾಟ ಮಳಿಗೆ ಸ್ಥಾಪಿಸಲು ಕ್ರಮ ವಹಿಸಲಾಗಿದೆ.

**6. ಕ್ಷೀರಾಭಿವೃದ್ಧಿ :**

ರಾಜ್ಯದಲ್ಲಿ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ಅಧೀನದ 14 ಜಿಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಪಶು ಸಂಗೋಪನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಕ್ಷೀರಾಭಿವೃದ್ಧಿ ಕಾರ್ಯಕ್ರಮಗಳನ್ನು

ಅನುಷ್ಠಾನಗೊಳಿಸುತ್ತಿದೆ. ರಾಜ್ಯದ ವಿವಿಧ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಪ್ರತಿ ಲೀಟರ್ ಹಾಲಿಗೆ ರೂ. 5/–ರಂತೆ ಡಿಸೆಂಬರ್ 2016 ರಿಂದ ಪ್ರೋತ್ಸಾಹಧನವನ್ನು ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ. 120600.00 ಲಕ್ಷಗಳನ್ನು ನಿಗದಿ ಪಡಿಸಲಾಗಿತ್ತು. ತದನಂತರ ರೂ.28022.00 ಲಕ್ಷಗಳನ್ನು ಹೆಚ್ಚುವರಿ ಅನುದಾನವಾಗಿ ಬಿಡುಗಡೆಗೂಳಿಸಿದೆ. ಅದರಲ್ಲಿ ಹಾಲು ಪೂರೈಕೆದಾರರಿಗೆ ರೂ. 124854.00 ಲಕ್ಷಗಳನ್ನು ಪಾವತಿ ಮಾಡಲಾಗಿದೆ. ಇದರಿಂದ ಕರ್ನಾಟಕ ಹಾಲು ಮಹಾ ಮಂಡಳಿಗೆ ಹಾಲಿನ ಸರಬರಾಜು ಗಣನೀಯ ಪ್ರಮಾಣದಲ್ಲಿ ಅಧಿಕಗೊಂಡಿದ್ದು, ಪ್ರಸಕ್ತ ದೈನಿಕ ಸರಾಸರಿ 8.90 ಲಕ್ಷ ಹಾಲು ಉತ್ಪಾದಕರು 70 ಲಕ್ಷ ಲೀಟರ್ ಹಾಲು ಸರಬರಾಜು ಮಾಡುತ್ತಿದ್ದಾರೆ. ಇದರಿಂದಾಗಿ ರೈತರ ಆದಾಯ ಹೆಚ್ಚಾಗಿ ಹೈನುಗಾರಿಕೆಯಲ್ಲಿ ಆಸಕ್ತಿ ಹೆಚ್ಚಿಸುವಂತೆ ಮಾಡಿದೆ.

2018–19ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹೈನು ಘಟಕ ಮತ್ತು ವಿವಿಧ ಘಟಕ ಸ್ಥಾಪನೆಗೆ ರೂ. 12200.00 ಲಕ್ಷಗಳನ್ನು ಹಾಗೂ ರೂ. 5500.00 ಲಕ್ಷಗಳ ಅನುದಾನವನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಹಾಗೂ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ರೂ. 1054.00 ಲಕ್ಷಗಳನ್ನು ನೀಡಲಾಗಿದೆ.

**7. ಪಶುಭಾಗ್ಯ ಯೋಜನೆ :**

2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪಶುಭಾಗ್ಯವೆಂಬ ಹೊಸ ಯೋಜನೆಯನ್ನು ಜಾರಿಗೊಳಿಸಿ, ವಾಣಿಜ್ಯ/ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆದು ಸಣ್ಣ ರೈತರಿಗೆ ಹಾಗೂ ಭೂರಹಿತ ಫಲಾನುಭವಿಗಳಿಗೆ ಹಸು, ಕುರಿ, ಆಡು, ಹಂದಿ, ಕೋಳಿ ಘಟಕಗಳನ್ನು ಸ್ಥಾಪಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.50 ಹಾಗೂ ಸಾಮಾನ್ಯ ವರ್ಗದವರಿಗೆ ಶೇ. 25 ಸಹಾಯಧನ ನೀಡಲಾಗಿದೆ. ಈ ಕಾರ್ಯಕ್ರಮವನ್ನು 2018–19ನೇ ಸಾಲಿನಲ್ಲಿ ಮುಂದುವರಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ. 50 ಸಹಾಯಧನ ನೀಡಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹಸು ಘಟಕಕ್ಕಾಗಿ ರೂ. 10.542 ಕೋಟಿ ಬಿಡುಗಡೆಯಾಗಿದ್ದು, ರೂ. 10.362 ಕೋಟಿ ವೆಚ್ಚವಾಗಿರುತ್ತದೆ. 2018–19ನೇ ಸಾಲಿನಲ್ಲಿ ಒಟ್ಟು 1757 ಭೌತಿಕ ಗುರಿಯನ್ನು ನಿಗದಿಪಡಿಸಲಾಗಿದ್ದು, ಅದರಲ್ಲಿ 1727 ಭೌತಿಕ ಸಾಧನೆಯಾಗಿರುತ್ತದೆ.

**8. ಜನಕ ಮೌಲ್ಯ ನಿರ್ಣಯ ಕೋಶ :**

ಇಲಾಖೆಯಲ್ಲಿ ಜನಕ ಮೌಲ್ಯ ನಿರ್ಣಯ ಕೋಶವು ಬೆಂಗಳೂರಿನಲ್ಲಿ ದಿನಾಂಕ:20–03–1972 ರಲ್ಲಿ ಸ್ಥಾಪನೆಯಾಯಿತು. ಕೃಷಿ ಆಧಾರಿತ ಭಾರತದ ಆರ್ಥಿಕ

ವ್ಯವಸ್ಥೆಯಲ್ಲಿ ಜಾನುವಾರುಗಳ ಪಾತ್ರ ಪ್ರಮುಖವಾಗಿದ್ದು, ದೇಶದ ಒಟ್ಟು ಆದಾಯಕ್ಕೆ ಅವುಗಳ ಕೊಡುಗೆ ಶೇಕಡಾ 15ಕ್ಕೂ ಮೇಲ್ಪಟ್ಟಿದೆ. ಹೆಣ್ಣು ರಾಸುಗಳು ಹಾಲು ಪೂರೈಸಿದರೆ, ಗಂಡು ಹೋರಿಗಳು ಬೇಸಾಯ ಹಾಗೂ ಇತರೆ ದುಡಿಮೆಗೆ ಅನುಕೂಲವಾಗುತ್ತದೆ. ಹಾಗೆಯೇ ಮಾಂಸ, ಚರ್ಮ, ಮೂಳೆ ಮತ್ತು ಸಾಕಷ್ಟು ಸಾವಯವ ಗೊಬ್ಬರ ಕೊಡುವ ಮೂಲಕ ಸುಸ್ಥಿರ ಬೇಸಾಯಕ್ಕೆ ತಳಹದಿಯಾಗಿರುತ್ತದೆ.

ಜಾನುವಾರು ಅಭಿವೃದ್ಧಿಯು ಇಲಾಖೆಯ ಬಹುಮುಖ್ಯ ಚಟುವಟಿಕೆಯಾಗಿರುತ್ತದೆ. ಕೃತಕ ಗರ್ಭಧಾರಣೆ ವಿಧಾನವನ್ನು ಅಳವಡಿಸಿಕೊಂಡು ಸ್ಥಳೀಯ ತಳಿಯ ಜಾನುವಾರುಗಳ ಉತ್ಪಾದಕತೆಯನ್ನು ಹೆಚ್ಚಿಸಲು ಕೈಗೊಂಡಿರುವ ಮಿಶ್ರತಳಿ ಅಭಿವೃದ್ಧಿ ಕಾರ್ಯಕ್ರಮಗಳು ಸಾಕಷ್ಟು ಯಶಸ್ವಿಯಾಗಿವೆ. ಜಾನುವಾರು ಅಭಿವೃದ್ಧಿ ಕಾರ್ಯಕ್ರಮದಡಿ ತಳಿ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದ್ದು, ಉತ್ತಮ ಗುಣಮಟ್ಟದ ಅಧಿಕ ಹಾಲು ನೀಡುವ ಗುಣಗಳುಳ್ಳ ತಳಿಗಳಿಗೆ ಜನಿಸಿದ ಹೋರಿಗಳನ್ನು ಆಯ್ಕೆ ಮಾಡಿ, ಅವುಗಳ ವೀರ್ಯ ಸಂಗ್ರಹಣೆ ಮಾಡಿ, ಅಂತಹ ವೀರ್ಯವನ್ನು ಸ್ಥಳೀಯ ತಳಿಯ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಿ ಅಧಿಕ ಹಾಲು ಇಳುವರಿ ನೀಡುವಂತಹ ಮಿಶ್ರ ತಳಿ ರಾಸುಗಳನ್ನು ಉತ್ಪಾದಿಸುವುದಲ್ಲದೆ, ಸ್ಥಳೀಯ ರಾಸುಗಳ ದುಡಿಮೆ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಉತ್ತಮ ದುಡಿಮೆಯ

ಗುಣಗಳುಳ್ಳ ಸ್ಥಳೀಯ ತಳಿಗಳಾದ ಅಮೃತ್ ಮಹಲ್, ಹಳ್ಳಿಕಾರ್, ಖಿಲಾರ್ ಮತ್ತು ದೇವಣಿ ಹೋರಿಗಳನ್ನು ಮತ್ತು ಸುರ್ತಿ ಕೋಣಗಳನ್ನು ಆಯ್ಕೆ ಮಾಡಿ ಅವುಗಳ ವೀರ್ಯದಿಂದ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ.

ಪ್ರಸ್ತುತ ಘನೀಕೃತ ವೀರ್ಯ ನಳಿಕೆ ತಂತ್ರಜ್ಞಾನ ಅಳವಡಿಸಿ ಕೃತಕ ಗರ್ಭಧಾರಣೆಯನ್ನು ಕೈಗೊಳ್ಳಲಾಗಿದೆ. ರಾಜ್ಯದಲ್ಲಿನ ಘನೀಕೃತ ವೀರ್ಯನಳಿಕೆಗಳ ಬೇಡಿಕೆಯನ್ನು ಇಲಾಖೆ ವ್ಯಾಪ್ತಿಯಲ್ಲಿರುವ ಮೂರು ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳ ಉತ್ಪಾದನೆಯಿಂದ ಪೂರೈಸಲಾಗುತ್ತಿದೆ.

ಇಲಾಖೆಯ ಜನಕ ಮೌಲ್ಯ ನಿರ್ಣಯ ಕೋಶ (Sire Evaluation Cell) ದ ಪ್ರಮುಖ ಕಾರ್ಯಗಳು ಈ ಕೆಳಕಂಡಂತಿವೆ:

1) ಹೋರಿ/ಕೋಣಗಳ ಗುಣಮಟ್ಟವನ್ನು ಮೌಲ್ಯ ಮಾಪನ ಮಾಡುವುದು,

2) ವೀರ್ಯನಳಿಕೆಗಳನ್ನು ತಾಂತ್ರಿಕ ರೀತಿಯಲ್ಲಿ ಶೇಖರಣೆ ಮತ್ತು ಸಂರಕ್ಷಣೆ ಮಾಡುವುದು.

3) ಸ್ಥಳೀಯ ತಳಿಗಳನ್ನು ಸಂರಕ್ಷಿಸುವುದು ಮತ್ತು ವೃದ್ಧಿಸುವುದು.

4) ವೀರ್ಯನಳಿಕೆಗಳನ್ನು ಜಿಲ್ಲಾ ಕೇಂದ್ರಗಳಿಗೆ ವಿತರಿಸುವುದು

ಮತ್ತು ಸರಬರಾಜು ಮಾಡುವಾಗ ಗುಣಮಟ್ಟ ಹಾಳಾಗದಂತೆ ನಿಗಾವಹಿಸುವುದು.

5) ಉತ್ತಮ ಉತ್ಪಾದಕತೆ ಮತ್ತು ಸುಸ್ಥಿರತೆಗಾಗಿ ರಾಸುಗಳಲ್ಲಿ ವಿದೇಶಿ ತಳಿಗಳ ಅನುವಂಶೀಯ ಗುಣಮಟ್ಟ ಶೇಕಡ 50 ರಷ್ಟು ಉಳಿಸಿಕೊಳ್ಳಲು ಕ್ರಮ ವಹಿಸುವುದು.

6) ತಳಿ ಅಭಿವೃದ್ಧಿ ಕಾರ್ಯಕ್ರಮದ ಉಸ್ತುವಾರಿ ನೋಡಿ ಕೊಳ್ಳುವುದು ಮತ್ತು ಒಳತಳಿಯೆಬ್ಬಿಸುವಿಕೆಯನ್ನು (In breeding) ತಡೆಯುವುದು.

**9. ವರಾಹ ಅಭಿವೃದ್ಧಿ:**

ರಾಜ್ಯದಲ್ಲಿ 5 ಹಂದಿ ಸಂವರ್ಧನಾ ಕ್ಷೇತ್ರಗಳಿದ್ದು, ಅವುಗಳು ಚಿಕ್ಕಮಗಳೂರು ಜಿಲ್ಲೆಯ ಕಳಸ, ಬೆಂಗಳೂರು ಜಿಲ್ಲೆಯ ಹೆಸರಘಟ್ಟ, ಕೊಡಗು ಜಿಲ್ಲೆಯ ಕೂಡಿಗೆ, ದಕ್ಷಿಣ ಕನ್ನಡ ಜಿಲ್ಲೆಯ ಕೊಯ್ಲಾ ಮತ್ತು ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿವೆ.

**10. ಮೇವು ಅಭಿವೃದ್ಧಿ :**

2018–19ನೇ ಸಾಲಿನಲ್ಲಿ ರಾಜ್ಯ ವಿಪತ್ತು ಪರಿಹಾರ ನಿಧಿ ಆರ್.ಕೆ. ವಿ. ವೈ. ಎನ್.ಎಲ್.ಎಂ ಮತ್ತು ರಾಜ್ಯ ವಲಯ ಯೋಜನೆಯಡಿಯಲ್ಲಿ ಒಟ್ಟು 1423845 ಮಿನಿಕಿಟ್‌ಗಳನ್ನು ರೈತರಿಗೆ ಹಸಿರು ಮೇವು ಬೆಳೆಯಲು ವಿತರಿಸಲಾಗಿದೆ.

ಇದರಿಂದ ಸುಮಾರು 142384 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 53.39 ಲಕ್ಷ ಮೆಟ್ರಿಕ್ ಟನ್ ಹಸಿರು ಮೇವು ಉತ್ಪಾದನೆ ಅಂದಾಜಿಸಲಾಗಿದೆ.

**11. ಮೊಲಗಳ ಅಭಿವೃದ್ಧಿ :**

ಮಾಂಸದ ಉತ್ಪಾದನೆಗಾಗಿ ಮೊಲಗಳ ಸಾಕಾಣಿಕೆಯನ್ನು ಪ್ರಚಾರಪಡಿಸುವ ಉದ್ದೇಶದಿಂದ ಸಿರಸಿ, ಬಂಕಾಪುರ ಮತ್ತು ಹೆಸರಘಟ್ಟದಲ್ಲಿ 3 ಮೊಲ ಸಾಕಾಣಿಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ ನ್ಯೂಜಿಲ್ಯಾಂಡ್ ವೈಟ್, ಕ್ಯಾಲಿಪೋರ್ನಿಯಾ ವೈಟ್, ಗ್ರೇಜಿಯಂಟ್ ಮತ್ತು ಚಿಂಚಿಲ್ಲಾ ತಳಿಗಳನ್ನು ಸಾಕಲಾಗುತ್ತಿದೆ. ಮೊಲದ ಮರಿಗಳನ್ನು ತಳಿ ಅಭಿವೃದ್ಧಿಗಾಗಿ ರೈತರಿಗೆ ನಿಗಧಿತ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

**12. ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳು :**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರ ಆರ್ಥಿಕ ಮಟ್ಟವನ್ನು ಉತ್ತಮಪಡಿಸುವುದು ಮತ್ತು ಕುಟುಂಬದ ಪೌಷ್ಠಿಕ ಆಹಾರದ ಕೊರತೆ ನಿವಾರಿಸುವುದು, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಗಳಡಿಯಲ್ಲಿ ಪಶುಸಂಗೋಪನಾ ಘಟಕಗಳನ್ನು ಒದಗಿಸುವುದು. ವಿಧವೆಯರು, ದೇವದಾಸಿಯರು, ಸಂಕಷ್ಟಗೊಳಗಾದ ಮಹಿಳೆಯರು ಗೌರವಯುತವಾಗಿ ಜೀವನ ನಡೆಸಲು

ಹೈನುಗಾರಿಕೆ ಘಟಕ ಒದಗಿಸುವುದು. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಹಿಳೆಯರಿಗಾಗಿ ಗಿರಿರಾಜ ಕೋಳಿ ಮರಿಗಳ ವಿತರಣಾ ಯೋಜನೆ, ದೇಶಿಯ ತಳಿ ಸಂರಕ್ಷಣೆಗೆ ಗಂಡು ಕರುಗಳ ಸಾಕಾಣಿಕೆಗೆ ಸಹಾಯಧನ ನೀಡುವ ಯೋಜನೆಗಳನ್ನು ರೂಪಿಸಿಲಾಗಿದೆ.

**13. ಜಾನುವಾರು ಗಣತಿ :**

ಜಾನುವಾರು ಗಣತಿಯು ಪಂಚವಾರ್ಷಿಕ ಸ್ವರೂಪ ವುಳ್ಳದಾಗಿದ್ದು, ಪ್ರತಿ 5 ವರ್ಷಗಳಿಗೊಮ್ಮೆ ರಾಜ್ಯದಲ್ಲಿ ಭಾರತ ಸರ್ಕಾರದ ಸೂಚನೆಗಳಂತೆ ನಡೆಸಬೇಕಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 20ನೇ ಜಾನುವಾರು ಗಣತಿಯು ಪ್ರಗತಿ ಯಲ್ಲಿರುತ್ತದೆ. 19ನೇ ಜಾನುವಾರು ಗಣತಿಯನ್ನು ರಾಜ್ಯದಲ್ಲಿ 2012ರ ಸೆಪ್ಟೆಂಬರ್-ಅಕ್ಟೋಬರ್ ಅವಧಿಯಲ್ಲಿ ನಡೆಸಲಾಯಿತು. ಜಾನುವಾರು ಗಣತಿಯು ಅತೀ ಪ್ರಾಮುಖ್ಯತೆಯ ಮಾಹಿತಿಯನ್ನು ಒಳಗೊಂಡಿರುತ್ತದೆ. ನಿಖರವಾದ ಹಾಗೂ ನಿಗಧಿತ ಸಮಯದೊಳಗೆ ಸಿಗುವ ಜಾನುವಾರುಗಳ ಮಾಹಿತಿಯು ಕಾರ್ಯನೀತಿ ಮತ್ತು ಯೋಜನೆಗಳನ್ನು ರೂಪಿಸಲು ಜಾನುವಾರು ಘಟಕಗಳ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿರುತ್ತದೆ.

**14. ಸಮಗ್ರ ಮಾದರಿ ಸಮೀಕ್ಷಾ ಯೋಜನೆ :**

ಕರ್ನಾಟಕ ರಾಜ್ಯದಲ್ಲಿನ ಪ್ರಮುಖ ಜಾನುವಾರು

ಉತ್ಪನ್ನಗಳಾದ ಹಾಲು, ಮೊಟ್ಟೆ, ಉಣ್ಣೆ ಮತ್ತು ಮಾಂಸದ ಉತ್ಪಾದನೆಯನ್ನು ಅಂದಾಜು ಮಾಡುವುದು ಹಾಗೂ ರಾಜ್ಯದಲ್ಲಿ ಜಾನುವಾರು ಸಾಕಾಣಿಕೆ ಪದ್ಧತಿಯನ್ನು ಜನರಿಗೆ ತಿಳಿಯಪಡಿಸುವುದು ಸಮಗ್ರ ಮಾದರಿ ಸಮೀಕ್ಷೆಯ ಉದ್ದೇಶವಾಗಿದ್ದು, 1976–77 ರಿಂದ ಈ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಸಾರ್ವಜನಿಕರಿಗೆ ಪೌಷ್ಠಿಕ ಆಹಾರವನ್ನು ಪೂರೈಸುವಲ್ಲಿ ಜಾನುವಾರು ಉತ್ಪನ್ನಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲದೆ, ಯೋಜನೆಯ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿ, ಆರ್ಥಿಕ ಮಟ್ಟದ ಸ್ಥಿತಿಗತಿಗಳನ್ನು ತಿಳಿಸುತ್ತವೆ.

ಈ ಸಮೀಕ್ಷೆಯ ಕಾರ್ಯವನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ ನಡೆಸಲಾಗುತ್ತಿದೆ. ಜಾನುವಾರು ಉತ್ಪನ್ನಗಳ ಏರಿಳಿತವನ್ನು ಅಧ್ಯಯನ ಮಾಡುವ ಸಲುವಾಗಿ ಈ ಸಮೀಕ್ಷಾ ಕಾರ್ಯಕ್ರಮವನ್ನು ಮೂರು ಋತುಗಳಲ್ಲಿ ಅಂದರೆ ಬೇಸಿಗೆಕಾಲ, ಮಳೆಗಾಲ ಮತ್ತು ಚಳಿಗಾಲದ ಅವಧಿಗಳಲ್ಲಿ ಕೈಗೊಳ್ಳಲಾಗುತ್ತಿದೆ.

## 15. ವಿಸ್ತರಣೆ ಮತ್ತು ತರಬೇತಿ ಕಾರ್ಯಕ್ರಮಗಳು :

2018–19 ನೇ ಸಾಲಿನಲ್ಲಿ ಇಲಾಖೆಯ ಅಧಿಕಾರಿಗಳು 4439 ರೈತ ಸಂಪರ್ಕ ಸಭೆಗಳು, 12970 ಗ್ರಾಮ ಸಂದರ್ಶನ

ಸಭೆಗಳು, 2256 ಜಾನುವಾರು ಆರೋಗ್ಯ ಶಿಬಿರಗಳು, ಪಶುಮೇಳ ಮತ್ತು 300 ಹಸು/ಕರುಗಳ ಪ್ರದರ್ಶನ ಹಾಗೂ ಮೈಸೂರು ದಸರಾ ವಸ್ತು ಪ್ರದರ್ಶನಗಳ ಮೂಲಕ ವಿಸ್ತರಣಾ ಕಾರ್ಯಕ್ರಮಗಳನ್ನು ಅನುಸ್ಠಾನಗೊಳಿಸಿರುತ್ತಾರೆ. ಇಲಾಖೆಯ 9 ತರಬೇತಿ ಕೇಂದ್ರಗಳಲ್ಲಿ (ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ/ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ/ ರೈತರ ತರಬೇತಿ ಕೇಂದ್ರ) 1291 ಅರೆತಾಂತ್ರಿಕ ಸಿಬ್ಬಂದಿಯವರಿಗೆ ಪುನಶ್ಚೇತನ ತರಬೇತಿ, 8131 ರೈತರು ಹಾಗೂ ಆಸಕ್ತರಿಗೆ ವೈಜ್ಞಾನಿಕ ಹೈನುಗಾರಿಕೆ, ಕುರಿ/ಮೇಕೆ ಸಾಕಾಣಿಕೆ, ಹಂದಿ ಸಾಕಾಣಿಕೆ, ಮೊಲ ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆಯಲ್ಲಿ ತರಬೇತಿ ನೀಡಲಾಗಿದೆ.

## 16. ಜಾಗೃತ ಮತ್ತು ಲೆಕ್ಕ ತಪಾಸಣೆ

- ಕಾನೂನು ಕೋಶ ಮತ್ತು ಜಾಗೃತ ಶಾಖೆಯ ಮೇಲುಸ್ತುವಾರಿ
- ಸಾರ್ವಜನಿಕ ಕುಂದುಕೊರತೆಗಳ ವಿಚಾರಣೆ ಮತ್ತು ವಿಲೇವಾರಿ
- ಯೋಜನಾ ಕಾರ್ಯಕ್ರಮಗಳ ಅನುಷ್ಠಾನದ ಪರಿಶೀಲನೆ ಮತ್ತು ತಾಂತ್ರಿಕ ಲೆಕ್ಕ ತಪಾಸಣೆ
- ಕಾಯ್ದೆ ಮತ್ತು ವಿಧೇಯಕಗಳಿಗೆ ಸಂಬಂಧಿಸಿದ ವಿಷಯಗಳು

- ಮಾಹಿತಿ ಹಕ್ಕು ಅಧಿನಿಯಮದಡಿ ಸಂಬಂಧಿಸಿದ ಅರ್ಜಿಗಳ ಮೇಲ್ವಿಚಾರಣೆ
- ಇಲಾಖೆಗೆ ಸಂಬಂಧಿಸಿದ ವಿಚಾರಣೆಗಳು

**ಗ. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಯೋಜನಾ ಕಾರ್ಯಕ್ರಮಗಳ ವಿವರ.**

**ಅ. ಕೇಂದ್ರ ಹಾಗೂ ಕೇಂದ್ರ ಪುರಸ್ಕೃತ ಯೋಜನೆ ಕಾರ್ಯಕ್ರಮಗಳು :**

**1. ಜಾನುವಾರು ರೋಗ ನಿಯಂತ್ರಣ : (2403–00–101–0–21) (ಕೇಂದ್ರ–60%: ರಾಜ್ಯ–40%)**

2018–19ನೇ ಸಾಲಿನಲ್ಲಿ ರೂ.5246.00 ಲಕ್ಷ ನಿಗದಿಪಡಿಸಲಾಗಿದೆ. ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಕಾರ್ಯಕ್ರಮ (ಕಾಲುಬಾಯಿಜ್ವರ, ಕರುಳುಬೇನೆ, ಗಳಲೇರೋಗ, ನೆರಡಿರೋಗ) ಲಸಿಕೆ ಪೂರ್ವ ಜಂತು ನಾಶಕ ಔಷಧಿ ನೀಡಿಕೆ, ಜಾನುವಾರು ಕಣ್ಗಾವಲು ಕಾರ್ಯಕ್ರಮಗಳು, ಕಟ್ಟಡ ದುರಸ್ತಿ/ನಿರ್ವಹಣೆ ಮುಂತಾದ ಕಾರ್ಯಕ್ರಮಗಳಿಗೆ ವೆಚ್ಚ ಭರಿಸಲು ಯೋಜಿಸಲಾಗಿದೆ. ಮಾರ್ಚ್–2019ರ ಅಂತ್ಯಕ್ಕೆ ರೂ. 3178.58 ಲಕ್ಷ ಬಿಡುಗಡೆಯಾಗಿದ್ದು, ರೂ. 2878.62 ಲಕ್ಷ ವೆಚ್ಚವಾಗಿರುತ್ತದೆ.

**2. ರಾಷ್ಟ್ರೀಯ ಜಾನುವಾರು ಮಿಷನ್: (2403–00–106–0–03):(ಕೇಂದ್ರ–60%: ರಾಜ್ಯ–40%)**

2018–19ನೇ ಸಾಲಿನಲ್ಲಿ ಈ ಯೋಜನೆಯಲ್ಲಿ ರೂ. 2266.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ. ಅಪಘಾತದಲ್ಲಿ ವಿಮೆ ಮಾಡದ ಎತ್ತು / ಹಸುಗಳ ಸಾವಿನಿಂದ ನಷ್ಟವನ್ನು ಅನುಭವಿಸಿದ ರೈತರಿಗೆ ಸಂಕಷ್ಟ ನಿವಾರಣೆಗಾಗಿ ಪ್ರತಿ ರಾಸುವಿಗೆ ರೂ. 10000/– ಪರಿಹಾರಧನ ಒದಗಿಸಲು ಯೋಜಿಸಲಾಗಿದೆ. ಸದರಿ ಅನುದಾನದಲ್ಲಿ ಈ ಕಾರ್ಯಕ್ರಮಕ್ಕಾಗಿ 2018–19 ನೇ ಸಾಲಿನಲ್ಲಿ ರೂ. 422.61 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಮಾರ್ಚ್–2019 ರ ಅಂತ್ಯಕ್ಕೆ ರೂ. 2266.00 ಲಕ್ಷ ಬಿಡುಗಡೆಯಾಗಿದ್ದು, ರೂ. 2184.16 ಲಕ್ಷ ವೆಚ್ಚವಾಗಿರುತ್ತದೆ.

**3. ಮಾದರಿ ಸಮೀಕ್ಷೆ ಯೋಜನೆ, ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆ ಅಂದಾಜು (2403–00–113–0–02) (ಕೇಂದ್ರ–50%: ರಾಜ್ಯ–50%)**

2018–19ನೇ ಸಾಲಿನಲ್ಲಿ ರೂ: 428.00 ಲಕ್ಷಗಳನ್ನು ಈ ಕಾರ್ಯಕ್ರಮದಡಿ ನಿಗದಿಪಡಿಸಲಾಗಿದೆ. ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆಯು ಬಗೆಗಿನ ಅಂದಾಜುಗಳನ್ನು ಮೂರು ಋತುಗಳಲ್ಲಿ ಬೇಸಿಗೆ, ಮಳೆ ಹಾಗೂ ಚಳಿಗಾಲಗಳಾಗಿ ವಿಂಗಡಿಸಿ ಆಯ್ದ ಹಳ್ಳಿಗಳಿಂದ

ಮಾಹಿತಿಗಳನ್ನು ಸಂಗ್ರಹಿಸಿ ಕ್ರೋಢೀಕರಿಸಿ ಭಾರತ ಸರ್ಕಾರಕ್ಕೆ ವರದಿ ಸಲ್ಲಿಸುವುದು ಹಾಗೂ ಅಧಿಕಾರಿ ಮತ್ತು ಸಿಬ್ಬಂದಿ ವೇತನ ಪಾವತಿಗಾಗಿ ವೆಚ್ಚ ಭರಿಸಲು ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ.323.00 ಲಕ್ಷ ಬಿಡುಗಡೆಯಾಗಿದ್ದು, ರೂ.335.52 ಲಕ್ಷ ವೆಚ್ಚವಾಗಿರುತ್ತದೆ.

4. **ಪಶು ಸಂಗೋಪನೆ ಸಂಖ್ಯೆ ಸಂಗ್ರಹ ಮತ್ತು ಪಶುಸಂಪತ್ತಿನ ಗಣತಿ(2403–00–113–0–04) (100% ಕೇ.ಪು.ಯೋ)**

2018–19ನೇ ಸಾಲಿನಲ್ಲಿ ರೂ.80.00 ಲಕ್ಷಗಳನ್ನು ಅನುದಾನವಾಗಿ ನಿಗದಿಪಡಿಸಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ.80.00 ಲಕ್ಷ ಬಿಡುಗಡೆಯಾಗಿದ್ದು, ರೂ.79.96 ಲಕ್ಷ ವೆಚ್ಚವಾಗಿರುತ್ತದೆ. 20ನೇ ಜಾನುವಾರು ಗಣತಿ ಕಾರ್ಯಕ್ಕಾಗಿ ವಿನಿಯೋಗಿಸಲಾಗಿದೆ.

5. **ರಾಷ್ಟ್ರೀಯ ದನ ತಳಿ ಸಂವರ್ಧನಾ ಯೋಜನೆ ಮತ್ತು ಹೈನು ಅಭಿವೃದ್ದಿ (2404–00–102–0–03) (ಶೇ.100 ಕೇಂದ್ರ)**

2018–19ನೇ ಸಾಲಿನಲ್ಲಿ ರೂ.12.07 ಲಕ್ಷಗಳ ಅನುದಾನವನ್ನು ಸಾಂಕೇತಿಕ ಅನುದಾನವಾಗಿ (Notional Allocation) ನಿಗದಿಪಡಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ. 12.07 ಲಕ್ಷ ಬಿಡುಗಡೆಯಾಗಿದ್ದು, ರೂ. 12.07 ಲಕ್ಷ ವೆಚ್ಚವಾಗಿರುತ್ತದೆ.

**6. ರಾಷ್ಟ್ರೀಯ ಹೈನುಗಾರಿಕೆ ಯೋಜನೆ: (2404–00–102–0–04) (ಶೇ.100 ಕೇಂದ್ರ)**

2018–19ನೇ ಸಾಲಿನಲ್ಲಿ ಯಾವುದೇ ಅನುದಾನ ನಿಗದಿಯಾಗಿರುವುದಿಲ್ಲ.

**ಆ. ರಾಜ್ಯವಲಯ ಕಾರ್ಯಕ್ರಮಗಳು :**

**1. ನಿರ್ದೇಶನ ಮತ್ತು ಆಡಳಿತ: (2403–00–001–0–01)**

2018–19ನೇ ಸಾಲಿನಲ್ಲಿ ರೂ. 7432.88 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಹೊರಗುತ್ತಿಗೆ ಆಧಾರಿತ ಸಿಬ್ಬಂದಿಗಳಿಗೆ ವೇತನ, ರಾಜ್ಯದಲ್ಲಿರುವ 4212 ಪಶುವೈದ್ಯ ಸಂಸ್ಥೆಗಳಿಗೆ ಔಷಧಿ ಮತ್ತು ರಾಸಾಯನಿಕಗಳು, ಆಸ್ಪತ್ರೆ ಪರಿಕರಗಳು ಹಾಗೂ ಕೃತಕ ಗರ್ಭಧಾರಣಾ ಸಲಕರಣೆಗಳ ಖರೀದಿ, ಜಾನುವಾರು ಮಾಹಿತಿ ಮಸ್ತಕ ಹಾಗೂ ಫೀಡ್ ಚಾರ್ಟ್ಸ್ /ವಹಿಗಳ ಮುದ್ರಣಕ್ಕಾಗಿ, ಸಾರ್ವಜನಿಕ ಕುಂದುಕೊರತೆ ಕೋಶ ಮತ್ತು ಸಹಾಯವಾಣಿ ಕೇಂದ್ರದ ನಿರ್ವಹಣೆ, ಇ–ಸೆಲ್ ಸ್ಥಾಪನೆ ಹಾಗೂ ಪಶುವೈದ್ಯಾಧಿ ಕಾರಿಗಳಿಗೆ ಜಿ.ಪಿ.ಎಸ್. ಫೋನ್ ಮತ್ತು ಜಿ.ಪಿ.ಎಸ್. ಸಿಮ್‌ಗಳನ್ನು ಒದಗಿಸುವ ಸಲುವಾಗಿ, ಆಯುಕ್ತಾಲಯದ ವಾಹನ ನಿರ್ವಹಣೆಗಾಗಿ, ವಾಹನ ಖರೀದಿಗಾಗಿ, 400 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಗಳನ್ನು ಪಶುಚಿಕಿತ್ಸಾ

ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ತಗಲುವ ಆನಾವರ್ತಕ ವೆಚ್ಚಭರಿಸಲು ಹಾಗೂ ಇನ್ನಿತರೆ ಚಟುವಟಿಕೆಗಳ ವೆಚ್ಚ ಭರಿಸಲು ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ.7432.88 ಲಕ್ಷ ಬಿಡುಗಡೆಯಾಗಿದ್ದು, ರೂ.7690.72 ಲಕ್ಷ ವೆಚ್ಚವಾಗಿರುತ್ತದೆ.

**2. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರ ಅನ್ವಯ ಬಳಕೆಯಾಗದ ಮೊತ್ತ (2403–00–001–0–04)**

2018–19ನೇ ಸಾಲಿನಲ್ಲಿ ರೂ. 1003.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಇದರಲ್ಲಿ ರೂ. 694.00 ಲಕ್ಷ ಅನುದಾನವನ್ನು ಅನುಸೂಚಿತ ಜಾತಿಗಳ ಉಪಯೋಜನೆಗೆ ಹಾಗೂ ರೂ. 309.00 ಲಕ್ಷ ಅನುದಾನವನ್ನು ಬುಡಕಟ್ಟು ಉಪ ಯೋಜನೆಗೆ ನಿಗದಿಪಡಿಸಲಾಗಿದೆ. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಫಲಾನುಭವಿಗಳಿಗೆ ಹೈನುಘಟಕ (ಘಟಕದ ವೆಚ್ಚ ರೂ. 1,20,000/–), ಕುರಿ/ಮೇಕೆ ಘಟಕ (ಘಟಕದ ವೆಚ್ಚ ರೂ. 67440/–) ಮತ್ತು ಹಂದಿ ಘಟಕಗಳನ್ನು (ಘಟಕದ ವೆಚ್ಚ ರೂ. 99,350/–) ನೀಡಲು ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ. 1003.00 ಲಕ್ಷ ಬಿಡುಗಡೆಯಾಗಿದ್ದು, ರೂ. 994.95 ಲಕ್ಷ ವೆಚ್ಚವಾಗಿರುತ್ತದೆ.

### 3. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ: (2403–00–101–0–06)

2018–19ನೇ ಸಾಲಿನಲ್ಲಿ ರೂ. 3503.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ, ಇತರ ಭತ್ಯೆ, ಭರಿಸಲಾಗುವುದು, ನಿವೃತ್ತಿ ಹೊಂದುವ ಅಧಿಕಾರಿ/ನೌಕರರ ಅಂತಿಮ ಸೌಲಭ್ಯ ಪಿಂಚಣಿ ವಂತಿಕೆ ಭರಿಸಲಾಗುವುದು. ಜಾನುವಾರುಗಳಲ್ಲಿ ರೋಗ ನಿಯಂತ್ರಣಗೊಳಿಸುವುದು, ರೋಗ ಪತ್ತೆಹಚ್ಚುವುದು, ತಪಾಸಣೆ ಮತ್ತು ಸಲಹೆ ನೀಡುವುದರೊಂದಿಗೆ ಲಸಿಕೆ ಉತ್ಪಾದನೆ ಮತ್ತು ಇತರೆ ಕಚೇರಿ ನಿರ್ವಹಣೆ ಹಾಗೂ ವಿಸ್ತರಣೆ ಮತ್ತು ತರಬೇತಿ ನೀಡಲು ಹಾಗೂ ಮುಂದುವರಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ. 3503.00 ಲಕ್ಷ ಬಿಡುಗಡೆಯಾಗಿದ್ದು, ರೂ. 3503.00 ಲಕ್ಷ ವೆಚ್ಚವಾಗಿರುತ್ತದೆ.

### 4. ನಾಗರೀಕ ಕಾಮಗಾರಿಗಳು (2403–00–101–0–18)

2018–19ನೇ ಸಾಲಿನಲ್ಲಿ ರೂ. 32.00 ಲಕ್ಷ ನಿಗದಿಪಡಿಸಲಾಗಿದೆ. ಇಲಾಖೆಯು ನಾಗರೀಕ ಕಾಮಗಾರಿಗಳನ್ನು ನಿರ್ವಹಿಸಲು ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ. 32.00 ಲಕ್ಷ ಬಿಡುಗಡೆಯಾಗಿದ್ದು, ರೂ. 32.00 ಲಕ್ಷ ವೆಚ್ಚವಾಗಿರುತ್ತದೆ.

**5. ಅಮೃತ್ ಮಹಲ್ ಕಾವಲು: (2403–00–102–0–09)**

2018–19ನೇ ಸಾಲಿನಲ್ಲಿ ರೂ.50.00 ಲಕ್ಷ ನಿಗದಿಪಡಿಸಲಾಗಿದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ಹಾಸನ ಜಿಲ್ಲೆಗಳಲ್ಲಿನ ಅಮೃತ್ ಮಹಲ್ ಕಾವಲುಗಳಲ್ಲಿ ಕಾವಲು ಜಮೀನಿನಲ್ಲಿ ಜಾನುವಾರುಗಳಿಗೆ ಅವಶ್ಯಕವಾಗಿ ಬೇಕಾಗುವ ಮೇವು ಬೆಳೆಯಲು, ನೀರಿನ ತೊಟ್ಟಿ ನಿರ್ಮಾಣ ಕಾಮಗಾರಿ ಹಾಗೂ ಮೇವು ಅಭಿವೃದ್ಧಿಗಾಗಿ ಅಗತ್ಯವಾದ ಮೂಲ ಭೂತ ಸೌಕರ್ಯಗಳನ್ನು ಸೃಷ್ಟಿಸುವುದು. ಮಾರ್ಚ್–2019ರ ಅಂತ್ಯಕ್ಕೆ ರೂ.50.00 ಲಕ್ಷ ಬಿಡುಗಡೆಯಾಗಿದ್ದು, ರೂ.50.00 ಲಕ್ಷ ವೆಚ್ಚವಾಗಿರುತ್ತದೆ.

**6. ಜಾನುವಾರು ಸಾಕಣೆ ಕ್ಷೇತ್ರಗಳು (2403–00–102–1–06)**

2018–19ನೇ ಸಾಲಿನಲ್ಲಿ ರೂ.3017.35 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಅಧಿಕಾರಿ/ ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಮೇವಿನ ಬೀಜ ಉತ್ಪಾದನೆ, ಸಂಸ್ಕರಣೆ ಮತ್ತು ಪ್ಯಾಕಿಂಗ್, ಬುಲ್ ಮದರ್ ಫಾರಂ ಸ್ಥಾಪನೆ ಮತ್ತು ನಿರ್ವಹಣೆ. ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮುನಿರಾಬಾದ್ ಕ್ಷೇತ್ರದಲ್ಲಿ ಪಶುಗಳ ದೇಶಿ ತಳಿಯ ವೀರ್ಯ ಸಂಸ್ಕರಣಾ ಕೇಂದ್ರಕ್ಕೆ ಹೋರಿಗಳ ಖರೀದಿ ಮತ್ತು ನಿರ್ವಹಣೆ, ಗುಲ್ಬರ್ಗ, ಧಾರವಾಡ ವಿಭಾಗ ಮಟ್ಟದಲ್ಲಿ ವಿರ್ಯಬ್ಯಾಂಕ್‌ಗಳ ಸ್ಥಾಪನೆ, ಕಟ್ಟಡ ನಿರ್ಮಾಣ

ದ್ರವಸಾರಜನಕ ಜಾಡಿಗಳ ಖರೀದಿ ಮತ್ತು ಸಾಗಾಣಿಕೆಗಾಗಿ 4 ಸಾಗಾಣಿಕೆ ವಾಹನಗಳು, ರಾಜ್ಯದಲ್ಲಿರುವ ವೀರ್ಯ ಸಂಸ್ಕರಣಾ ಕೇಂದ್ರಗಳಲ್ಲಿ ಘನೀಕೃತ ವೀರ್ಯನಳಿಕೆ ಉತ್ಪಾದನೆಗಾಗಿ ದ್ರವಸಾರಜನಕ ಹಾಗೂ ರಾಸಾಯನಿಕಗಳನ್ನು ಮತ್ತು ಇಲಾಖೆಯ ಜಾನುವಾರು ಕ್ಷೇತ್ರಗಳಲ್ಲಿ ಜಾನುವಾರುಗಳಿಗೆ ಪಶು ಆಹಾರ ಖರೀದಿ ಹಾಗೂ ಜಾನುವಾರು ಕ್ಷೇತ್ರಗಳ ಮತ್ತು ವೀರ್ಯ ಉತ್ಪಾದನಾ ಕೇಂದ್ರಗಳ ವಾಹನಗಳ ನಿರ್ವಹಣೆ ಮತ್ತು ದುರಸ್ತಿ, ಸಾಧನ ಸಲಕರಣೆಗಳ ನಿರ್ವಹಣೆ, ಜಾನುವಾರು ಕ್ಷೇತ್ರಗಳಲ್ಲಿ ಬೇಕಾದ ಆವಶ್ಯಕ ಕಟ್ಟಡಗಳ ನಿರ್ಮಾಣ/ ನಿರ್ವಹಣೆ ಹಾಗೂ ದುರಸ್ತಿ ಕಾರ್ಯಕ್ಕಾಗಿ ವೆಚ್ಚವನ್ನು ಭರಿಸಲು ಯೋಜಿಸಲಾಗಿದೆ. ಮಾರ್ಚ್–2019 ರ ಅಂತ್ಯಕ್ಕೆ ರೂ.3017.35 ಲಕ್ಷ ಬಿಡುಗಡೆಯಾಗಿದ್ದು, ರೂ. 2996.55 ಲಕ್ಷ ವೆಚ್ಚವಾಗಿರುತ್ತದೆ.

**7. ಮೈಸೂರಿನ ಪಿಂಜರಾಪೋಲ್ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ (2403–00–102–2–40)**

2018–19ನೇ ಸಾಲಿನಲ್ಲಿ ರೂ. 400.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದ್ದು ಈ ಯೋಜನೆಯಲ್ಲಿ ಅನುತ್ಪಾದಕ ಹಾಗೂ ಪರಿತ್ಯಕ್ತ ಜಾನುವಾರುಗಳನ್ನು ನಿರ್ವಹಣೆ ಮಾಡುತ್ತಿರುವ ಪಿಂಜರಾಪೋಲ್ ಹಾಗೂ ಇತರೆ ಗೋಶಾಲೆಗಳಿಗೆ ನೀರಿನ ಸರಬರಾಜು, ಮೇವು, ಆರೋಗ್ಯ ಒದಗಿಸಲು ಹಾಗೂ ಪ್ರಾಣಿ ಕಲ್ಯಾಣ ಮಂಡಳಿ ರಾಜ್ಯ

ಘಟಕವನ್ನು ಬಲವರ್ಧನೆ ಮಾಡುವ ಮೂಲಕ ಜಿಲ್ಲಾ ಪ್ರಾಣಿ ದಯಾ ಸಂಘಗಳಿಗೆ ಅನುದಾನವನ್ನು ನೀಡಲು ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ. 400.00 ಲಕ್ಷ ಬಿಡುಗಡೆಯಾಗಿದ್ದು, ರೂ. 399.02 ಲಕ್ಷ ವೆಚ್ಚವಾಗಿರುತ್ತದೆ.

**8. ರಾಜ್ಯ ಕುಕ್ಕುಟ ಸಾಕಣೆ ಕ್ಷೇತ್ರಗಳು (2403–00–103–0–01)**

2018–19ನೇ ಸಾಲಿನಲ್ಲಿ ರೂ. 697.49 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ರಾಜ್ಯದಲ್ಲಿನ ಕುಕ್ಕುಟ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳು, ಹಾಗೂ ದಿನಗೂಲಿ ನೌಕರರಿಗೆ ವೇತನ ಪಾವತಿಗಾಗಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯ ಅಧಿಕಾರಿ/ ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯ ನಿರ್ವಹಣೆ ಸಂಬಂಧ ಸಾಂಧರ್ಬಿಕ ವೆಚ್ಚಗಳು, 6 ಕುಕ್ಕುಟ ಕೇಂದ್ರಗಳ ಹಾಗೂ ಕ್ಯೂ.ಸಿ.ಪಿ.ಎಫ್ ಕಛೇರಿಯ ಉಪಯೋಗಕ್ಕಾಗಿ ಅವಶ್ಯವಿರುವ ಎಲ್ಲಾ ಸಾಮಾಗ್ರಿಗಳು ಹಾಗೂ ಉಪಕರಣ ಖರೀದಿಗಾಗಿ, ಹಾಗೂ ವಾರ್ಷಿಕ ನಿರ್ವಹಣೆ. (ಎ.ಎಂ.ಸಿ), ಕುಕ್ಕುಟ ಆಹಾರ ಖರೀದಿಗಾಗಿ, ಕಟ್ಟಡಗಳ ದುರಸ್ಥಿ, ಲಘು ಕಾಮಗಾರಿ, ನವೀಕರಣ ಹಾಗೂ ಕಟ್ಟಡದ ವಿದ್ಯುತ್

ಪಾವತಿಗಾಗಿ, ಎಲ್ಲಾ ಅಗತ್ಯ ಸಾಮಗ್ರಿಗಳ ಖರೀದಿಗಾಗಿ, ವಾಹನಗಳಿಗೆ ಇಂಧನ/ ದುರಸ್ಥಿ ಜನರೇಡರ್‌ಗಳಿಗೆ ಇಂಧನ / ದುರಸ್ಥಿಗಾಗಿ ಯೋಜಿಸಲಾಗಿದೆ. ಮಾರ್ಚ್–2019ರ ಅಂತ್ಯಕ್ಕೆ ರೂ.697.49ಲಕ್ಷ ಬಿಡುಗಡೆಯಾಗಿದ್ದು, ರೂ. 696.04 ಲಕ್ಷ ವೆಚ್ಚವಾಗಿರುತ್ತದೆ.

**9. ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ದಿ ನಿಗಮ ನಿಯಮಿತ: (2403–00–104–0–02)**

2018–19ನೇ ಸಾಲಿನಲ್ಲಿ ರೂ. 2577.53 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರ ಹಾಗೂ ಹೊರಗುತ್ತಿಗೆ ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ, ಭತ್ಯೆ, ಪ್ರವಾಸ ಭತ್ಯೆ, ಕಛೇರಿ ವೆಚ್ಚ ಮತ್ತು ಇತ್ಯಾದಿಗಳನ್ನು ಭರಿಸಲಾಗುವುದು. ನಿಗಮದ ವತಿಯಿಂದ ಕುರಿ /ಮೇಕೆಗಳಿಗೆ ಅಗತ್ಯವಿರುವ ಜಂತು ನಾಶಕ, ಲವಣ ಮಿಶ್ರಣ ಹಾಗೂ ಇತರ ಔಷಧಗಳ ಪೂರೈಕೆ, ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಸದಸ್ಯರುಗಳಿಗೆ (10+1) ಕುರಿ/ಮೇಕೆ ಘಟಕ ಪೂರೈಸಲು, 6 ಕುರಿ ಸಂವರ್ಧನಾ ಕೇಂದ್ರಗಳ ನಿರ್ವಹಣೆ ಮಾಡಲು, ಕುರಿಗಳ ಆರೋಗ್ಯ ರಕ್ಷಣೆ, ತಳಿ ಅಭಿವೃದ್ದಿಗಾಗಿ ಟಗರು ಪೂರೈಕೆ ಮಾಡಲು, ಕುರಿ ಮತ್ತು ಮೇಕೆ ಸಾಕಾಣಿಕೆದಾರರ

ಸಹಕಾರ ಸಂಘಗಳ ಮಹಾಮಂಡಳದಿಂದ ಕುರಿ/ಮೇಕೆಗಳ ಆಧುನಿಕ ವಧಾಗಾರಗಳ ಸ್ಥಾಪನೆ ಮತ್ತು ಕುರಿ/ಮೇಕೆ ಮಾಂಸದ ಮಾರಾಟ ಮಳಿಗೆಗಳ ಬಲವರ್ಧನೆಗಾಗಿ ಯೋಜಿಸಲಾಗಿದೆ. ಮಾರ್ಚ್ 2019 ರ ಅಂತ್ಯಕ್ಕೆ ರೂ. 2577.53 ಲಕ್ಷ ಬಿಡುಗಡೆಯಾಗಿದ್ದು, ರೂ. 2577.53 ಲಕ್ಷ ವೆಚ್ಚವಾಗಿರುತ್ತದೆ.

**10. ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ (2403–00–104–0–12)**

2018–19ನೇ ಸಾಲಿನಲ್ಲಿ ರೂ. 2200.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ. ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ. 5000/– ಪರಿಹಾರ ಧನ ಹಾಗೂ 6 ತಿಂಗಳ ಒಳಗಿನ ಕುರಿ /ಮೇಕೆ ಆಕಸ್ಮಿಕ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ/ಮೇಕೆಗೆ ರೂ.2500/– ಪರಿಹಾರ ಧನ ಒದಗಿಸಲು ಯೋಜಿಸಲಾಗಿದೆ. ಮಾರ್ಚ್–2019ರ ಅಂತ್ಯಕ್ಕೆ ರೂ.2200.00ಲಕ್ಷ ಬಿಡುಗಡೆಯಾಗಿದ್ದು, ರೂ. 2200.00 ಲಕ್ಷ ವೆಚ್ಚವಾಗಿರುತ್ತದೆ.

**11. ಹಂದಿ ಸಂವರ್ಧನಾ ಕ್ಷೇತ್ರಗಳು (2403–00–105–0–01)**

ಪ್ರಸಕ್ತ ಸಾಲಿನಲ್ಲಿ ರೂ.157.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಅಧಿಕಾರಿ/ಸಿಬ್ಬಂದಿಯವರ ವೇತನ ಹಾಗೂ ಭತ್ಯೆಗಳ ಪಾವತಿಗಾಗಿ, ಹೊರಗುತ್ತಿಗೆ ಆಧಾರದ ನೌಕರರಿಗೆ ವೇತನ ಪಾವತಿಸಲು, ಹಂದಿ ಘಟಕಗಳ ಆಹಾರ ಖರೀದಿಗಾಗಿ, ಸಾಮಾಗ್ರಿ ಮತ್ತು ಸಲಕರಣೆ ಖರೀದಿಗಾಗಿ, ಕಟ್ಟಡಗಳ ದುರಸ್ಥಿ, ಲಘು ಕಾಮಗಾರಿ, ನವೀಕರಣ ಹಾಗೂ ಕಟ್ಟಡದ ವಿದ್ಯುತ್ ಪಾವತಿಗಾಗಿ ಯೋಜಿಸಲಾಗಿದೆ. ಮಾರ್ಚ್–2019 ರ ಅಂತ್ಯಕ್ಕೆ ರೂ.157.00 ಲಕ್ಷ ಬಿಡುಗಡೆಯಾಗಿದ್ದು, ರೂ.158.80 ಲಕ್ಷ ವೆಚ್ಚವಾಗಿರುತ್ತದೆ.

**12. ಜಾನುವಾರು ಅಭಿವೃದ್ಧಿ ಫಾರಂ (2403–00–106–0–01)**

